ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 49 | ಡಿಸೆಂಬರ್ 7, 1980 | ಬೆಲೆ : 50 ಪೈಸೆ

ರಾಕ್ಷಸೀ ಕೃತ್ಯ

ಬಿಹಾರ ರಾಜ್ಯದಲ್ಲಿ ಭಾಗಲ್ಪುರ ಜೈಲಿನಲ್ಲಿ ಪೋಲೀಸರು 29 ಖೈದಿಗಳ ಕಣ್ಣುಗಳನ್ನು ಕುಕ್ಕಿ ತೆಗೆದು, ಅಂಧರನ್ನಾಗಿ ಮಾಡಿದ ವಾರ್ತೆ ಮಾನವೀಯ ಪ್ರಜ್ಞೆಗೆ ಸವಾಲು ಹಾಕುವಂತಿದೆ. ಇದು ಅತ್ಯಂತ ಹೀನವಾದ ರಾಕ್ಷಸೀ ಕೃತ್ಯವಾಗಿದ್ದು, ಮಾನವೀಯತೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ನಂಬುವವರೆಲ್ಲರೂ ಈ ಹೇಯ ಕೃತ್ಯವನ್ನು ಖಂಡಿಸಿ, ಪ್ರತಿಭಟಿಸಲೇಬೇಕು.

ತಡವಾಗಿಯಾದರೂ, ಅಂದರೆ 29 ಮಂದಿ ಕಣ್ಣು ಕಳೆದುಕೊಂಡ ಮೇಲಾದರೂ ಈ ಕೃತ್ಯವು ಬಹುಲಾದುದು; ಸರಕಾರವು ಉನ್ನತ ಪೋಲೀಸು ಅಧಿಕಾರಿಗಳ ಮೇಲೆ ಕ್ರಮಕೈಗೊಂಡಿರುವುದು-ಇವೆಲ್ಲಾ ಮುಂದೆ ಈ ರೀತಿಯ ದುಷ್ಕೃತ್ಯ ಮಾಡುವವರ ಮೇಲೆ ಕಡಿವಾಣ ಹಾಕಬಲ್ಲುದು. ಆದರೆ, ಇಷ್ಟರಿಂದಲೇ ಮುಂದೆ ಹೀಗಾಗದಂತೆ ತಡೆಹಿಡಿಯುವುದು ಸಾಧ್ಯವಿಲ್ಲ. ನಮ್ಮ ದೇಶದಲ್ಲಿನ ಜೈಲುಗಳಲ್ಲಿನ ಅತ್ಯಂತ ಶೋಚನೀಯ ವ್ಯವಸ್ಥೆ, ಬಂಧಿತರ ಮೇಲೆ ಪೋಲೀಸ್ ದೌರ್ಜನ್ಯ-ಇವೆಲ್ಲಾ ಕಳೆದ

ಸಂಪಾದಕೀಯ

ನಾಲ್ಕೈದು ವರ್ಷಗಳಿಂದ ಬೆಳಕಿಗೆ ಬರುತ್ತಾ ಇವೆ. ಜೈಲುಗಳ ಸುಧಾರಣಾ ಮಾತುಗಳು ಮತ್ತು ಸಲಹೆಗಳು ಜಾರಿಯಾಗುವತ್ತ ಏನೇನೂ ಕ್ರಮವನ್ನು ವಹಿಸಿದಂತಿಲ್ಲ

ಬಂಡವಾಳಶಾಹಿ-ಭೂಮಾಲೀಕ ಪ್ರಭುತ್ವದ ಅಡಿಯಾಳುಗಳಾಗಿರುವ ಪೋಲೀಸರಿಗೆ ಸಾಮಾಜಿಕ ಕಳಕಳಿ ಮತ್ತು ಮಾನವೀಯ ಮೌಲ್ಯಗಳು ಬಾರದಂತೆ ಪ್ರಜ್ಞಾಪೂರ್ವಕವಾಗಿ ಆಳುವವರ್ಗಗಳಿಂದ ಮಾಡಲಾಗುತ್ತದೆ. ಇದರೊಂದಿಗೆ ಸ್ಥಳೀಯ ಸ್ವಾರ್ಥಹಿತಾಸಕ್ತಿಗಳ ಪ್ರಭಾವವೂ ಸೇರಿಕೊಂಡು ಬೇಲಿಯೇ ಹೊಲವನ್ನು ಮೇಯುವಂತೆ ಪೋಲೀಸರೇ ಕಾನೂನುಗಳನ್ನು ಭಕ್ಷಿಸುತ್ತಾರೆ. ಭಾಗಲ್ಪುರ ಜೈಲಿನಲ್ಲಿ ಕಣ್ಣು ಕುಕ್ಕಿದ್ದು ಸರಿ ಎಂದೂ, ಪೋಲೀಸು ಅಧಿಕಾರಿಗಳ ಮೇಲೆ ಕ್ರಮವಹಿಸಿರುವುದನ್ನು ಅಲ್ಲಿಯ ಸ್ವಾರ್ಥಹಿತಾಸಕ್ತಿಗಳು ವಿರೋಧಿಸುತ್ತಿರುವುದೂ ಮೇಲಿನ ಮಾತನ್ನು ಪುಷ್ಟೀಕರಿಸುತ್ತಿವೆ.

ಅದೇನೇ ಇದ್ದರೂ ಜೈಲುಗಳ ಸುಧಾರಣೆಗಾಗಿ, ಖೈದಿಗಳನ್ನೂ ಮಾನವೀಯತೆಯಿಂದ ನೋಡಿಕೊಳ್ಳುವುದಕ್ಕಾಗಿ ಕ್ರಮವಹಿಸುವಂತೆ ರಾಷ್ಟ್ರದಾದ್ಯಂತ ಒತ್ತಾಯ, ಹೋರಾಟ ಬೆಳೆಯಬೇಕಾಗಿದೆ. ●

ಐಕ್ಯತೆ ಅನಿವಾರ್ಯ

ಇತ್ತೀಚೆಗೆ ಕೇರಳದಲ್ಲಿ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಮತ್ತು ಕಾಂಗ್ರೆಸ್ (ಯು) ಬೆಂಬಲಿಗರ ನಡುವೆ ನಡೆದ ಘರ್ಷಣೆ-ಪ್ರತಿಕ್ರಿಯೆಗಳು ಪ್ರಜಾಪ್ರಭುತ್ವ ಪ್ರೇಮಿಗಳನ್ನು ವಿಮಂಚನೆಗೀಡುಮಾಡಿವೆ. ದೈಹಿಕ ಘರ್ಷಣೆಯ ಮಟ್ಟಕ್ಕೆ ಇಳಿದದ್ದಂತೂ ದುರಾದೃಷ್ಟಕರವಾದದ್ದು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಈ ಘಟನೆಗೆ ಕಳವಳ ವ್ಯಕ್ತಪಡಿಸಿರುವುದಲ್ಲದೆ ಈ ಬೆಳವಣಿಗೆ ಸರ್ವಾಧಿಕಾರಿ ಶಕ್ತಿಗಳು ಬಲಿಷ್ಠವಾಗಬಹುದೆಂಬ ಶಂಕೆಯನ್ನು ವ್ಯಕ್ತಪಡಿಸಿದೆ ಸರ್ವಾಧಿಕಾರಿ ಶಕ್ತಿಗಳು ಬೆಳೆಯದಂತೆ ನೋಡಿಕೊಳ್ಳುವದು ಎಡ ಪ್ರಜಾಪ್ರಭುತ್ವ ರಂಗದ ಆದ್ಯ ಕರ್ತವ್ಯವಾಗಿದ್ದು, ಘರ್ಷಣೆಗಳನ್ನು ತಡೆಯುವುದಷ್ಟೇ ಅಲ್ಲದೇ ಪರಸ್ಪರ ಭಿನ್ನಾಭಿಪ್ರಾಯಗಳನ್ನು ಸುಮುಖವಾಗಿ ಪರಿಹರಿಸಿಕೊಳ್ಳಬೇಕಾಗಿದೆ.

ಕೆಲವು ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೂ, ತಮ್ಮ ತಮ್ಮ ತಾತ್ವಿಕ ನಿಲುವನ್ನು ಬಿಟ್ಟುಕೊಡದೆ ಐಕ್ಯತೆಯನ್ನು ರಕ್ಷಿಸುವದು ಸಾಧ್ಯವಿರುವದು ಕೇವಲ ಸಂಬಂಧಪಟ್ಟವರು ಈ ಬಗ್ಗೆ ಪ್ರತ್ಯೇಕ ಗಮನ ಕೊಟ್ಟರೆ ಮಾತ್ರ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಈ ಅಂಶದ ಬಗ್ಗೆ ಸದಾ ಎಚ್ಚರಿಕೆ ವಹಿಸಿದ್ದು, ಪಕ್ಷದ ಸದಸ್ಯರು, ಘಟಕಗಳು ತಪ್ಪು ಮಾಡಿದರೆ ಕೈಗೊಳ್ಳಲು ಪಕ್ಷದ ಕೇಂದ್ರ ಹಾಗೂ ರಾಜ್ಯ ಸಮಿತಿಗಳು ಸಿದ್ಧವಿರುವವು. ಹಾಗೆಯೇ ಎಡ ಪ್ರಜಾಪ್ರಭುತ್ವ ರಂಗದ ಇತರರು ಈ ಬಗ್ಗೆ ನಿಗಾವಹಿಸಿದರೆ ಮಾತ್ರ ಐಕ್ಯತೆ ಉಳಿಸಲು ಸಾಧ್ಯ. ಈ ವಿಷಯದಲ್ಲಿ ಕಾಂಗ್ರೆಸ್ (ಯು) ಪಾತ್ರ ದೊಡ್ಡದಿದ್ದು, ಅವಿಭಜಿತ ಕಾಂಗ್ರೆಸ್ಸಿನ ಕಮ್ಯುನಿಸ್ಟ್ ವಿರೋಧಿ ನಿಲುವಿನ ಹಳೆಯ ದಿನಗಳನ್ನು ಮರೆಯುವದು ಸೂಕ್ತ.

ಕಾಂಗ್ರೆಸ್ (ಯು) ಅಧ್ಯಕ್ಷ ಶ್ರೀ ದೇವರಾಜ ಅರಸರು ಈ ಘಟನೆಯ ಬಗ್ಗೆ ಯೋಗ್ಯ ನಿಲುವನ್ನು ತೆಗೆದುಕೊಂಡಿದ್ದು ಪ್ರಶಂಸಾರ್ಹವಾದುದು. ವಿದ್ಯಾರ್ಥಿ ಗುಂಪುಗಳ ನಡುವೆ ನಡೆದ ಘರ್ಷಣೆ, ಸಿ ಪಿ ಐ (ಎಂ) ಮತ್ತು ಕಾಂಗ್ರೆಸ್ (ಯು) ನಡುವೆ ವಿರಸವುಂಟಾಗುವದಿಲ್ಲವೆಂದೂ, ಕೇರಳದ ಪ್ರಸಕ್ತ ಸರಕಾರಕ್ಕೆ ತೊಂದರೆಯಾಗುವುದಿಲ್ಲವೆಂದು ಅವರು ತಿಳಿಸಿದ್ದು ಅತ್ಯಂತ ಸೂಕ್ತ.

ಸಿ.ಪಿ.ಐ.(ಎಂ) ಪರವಾದಿ ಕೇರಳ ರಾಜ್ಯ ಘಟಕದ ಕಾರ್ಯದರ್ಶಿ ಕಾಂ,

(ಕಡೇ ಪುಟ ನೋಡಿ)

ಜನತೆ ಹತೋಟಿ ತಪ್ಪುತ್ತಿದ್ದಾರೆ

ಇ. ಎಂ. ಎಸ್.

“ನಾಸಿಕದ ಬಳಿ ರೈಲು ಅಪಘಾತ ತಪ್ಪಿಸಿಕೊಂಡಿತು”, “ಕಾನ್ಪುರ ಗಲಭೆಯಲ್ಲಿ ಒಬ್ಬರು ಸತ್ತು ಒಂಬತ್ತು ಮಂದಿ ಗಾಯಗೊಂಡಿದ್ದಾರೆ” “ಲಕ್ನೋದಲ್ಲಿ ಬಿಕ್ಕಟ್ಟು ಹೆಚ್ಚುತ್ತಿದೆ” “ಒರಿಸ್ಸಾ ಪಟ್ಟಣದಲ್ಲಿ ಅನಿರ್ದಿಷ್ಟ ಕರ್ಫ್ಯೂ” “ಪೋಲೀಸರ ಜೊತೆ ಭೀಕರ ಕದನ” “ಅಸ್ಸಾಂ ಸರ್ಕಾರಿ ಸಿಬ್ಬಂದಿಯಿಂದ ಅನಿರ್ದಿಷ್ಟ ಕಾಲದ ಮುಷ್ಕರದ ಬೆದರಿಕೆ” — ಇವು ಒಂದು ದಿವಸ ರಾಷ್ಟ್ರೀಯ ದೈನಿಕದ ಮುಖಪುಟದಲ್ಲಿ ಬಂದ ಸುದ್ದಿಗಳು (ಪೇಟ್ರಿಯೆಟ್ ನವೆಂಬರ್ 16)

ಇಂಥ ಘಟನೆಗಳ ಸಂಖ್ಯೆ ಹೆಚ್ಚು ಕಡಿಮೆ ಇದ್ದರೂ ದೇಶದಾದ್ಯಂತ ನಡೆಯುತ್ತಿರುವುದು ಇದೇ ಇಂಥ ಘಟನೆಗಳು ಇಲ್ಲದ ಪ್ರದೇಶಗಳು ಮತ್ತು ಜನಪ್ರಿಯ ಚಳುವಳಿಗಳ ಇತರ ಪ್ರಕಾರಗಳೂ ಅದೇ ದಿನ ಬೇಕಾದಷ್ಟು ನಡೆದಿವೆ.

ಬೇರೆ ಮಾತಿನಲ್ಲಿ ಹೇಳಬೇಕಾದರೆ ಜನತೆ ಹತೋಟಿ ತಪ್ಪುತ್ತಿದ್ದಾರೆ ಯಾವ ದಿನವಾದರೂ ಯಾವ ಸಮಯದಲ್ಲಾದರೂ ಅವರು ಅಧಿಕಾರಿಗಳ ಜೊತೆ ಕದನಕ್ಕೆ ಇಳಿಯುತ್ತಾರೆ ಕೋಮುಗಲಭೆಗಳಲ್ಲಿ ಆದ ಹಾಗೆ ಜನರ ಐಕ್ಯತೆಗೆ ಧಕ್ಕೆ ಬರುವಂತೆ ಅವರು ನಡೆದುಕೊಳ್ಳಬಹುದು. ಕೆಲವೊಮ್ಮೆ ಅವರ ನಡವಳಿಕೆಗಳು ಕೋಮು, ಜಾತಿ ಮತ್ತು ಇತರ ಮೇರೆಗಳನ್ನು ಮೀರಬಹುದು.

ಈ ಸಂದರ್ಭದಲ್ಲಿ ಮುಖ್ಯವಾದದ್ದು ರೈತರಲ್ಲಿ ಬೆಳೆಯುತ್ತಿರುವ ಅಶಾಂತಿ. ಈ ವರ್ಗ ಎಚ್ಚರವಾಗುವುದು ತಡ. ಆದರೆ ಒಮ್ಮೆ ಎಚ್ಚರವಾದರೆ ಅವರು ಏನನ್ನಾದರೂ ಸಾಧಿಸಬಲ್ಲರು. ರೈತರ ಚಳುವಳಿ ಒಂದು ಕಡೆ, ಸಂಘಟಿತ ಕಾರ್ಮಿಕವರ್ಗ ಮತ್ತು ಮಧ್ಯಮವರ್ಗದ ಉದ್ಯೋಗಿಗಳ ಚಳುವಳಿ ಇನ್ನೊಂದು ಕಡೆ, ಇವೆಲ್ಲವೂ ಇಡೀ ಸನ್ನಿವೇಶವನ್ನೇ ಬದಲಾಯಿಸಬಹುದು.

ಗ್ರಾಮೀಣ ಪ್ರದೇಶಗಳಲ್ಲಿ ಅಶಾಂತಿ

ಮೇಲಿನ ಸುದ್ದಿಗಳು ಪ್ರಕಟವಾಗಿರುವ ದಿನದ ಪತ್ರಿಕೆಯಲ್ಲೇ, ಪೇಟ್ರಿಯೆಟ್‌ನ ವಿಶೇಷ ವರದಿಗಾರರು, ಮಹಾರಾಷ್ಟ್ರದ ನಾಸಿಕ್ ಮತ್ತು ಪಂಜಾಬಿನ ಗಲಭೆಗಳ ಬಗ್ಗೆ ಶ್ರೀಮತಿ ಗಾಂಧಿ ವಿಚಾರಿಸಿಕೊಂಡರು. ಈ ಬಗ್ಗೆ ಗೃಹಮಂತ್ರಿ ಜೇಲ್‌ಸಿಂಗರ ಜೊತೆ ಚರ್ಚಿಸಿದರು ಆಯಾ ಪ್ರದೇಶದ ಮುಖ್ಯಮಂತ್ರಿಗಳ ಜೊತೆಯೂ ಮಾತನಾಡಿ, ಮುಂಬರುವ ವಾರಗಳಲ್ಲಿ ಚಳುವಳಿ ಹರಡಿ, ತೀವ್ರ ಕಾನೂನು ಮತ್ತು ಶಿಸ್ತಿನ ಭಂಗ ನಡೆಯಬಹುದೆಂಬ ಸುದ್ದಿಗಳು ಬಂದಿರುವುದರ ಬಗ್ಗೆ ಮಾತನಾಡಿದರು. ತಮ್ಮ ಉತ್ಪನ್ನಕ್ಕೆ ಸರಿಯಾದ ಬೆಲೆಕೊಡಬೇಕೆಂದು ರೈತರು ತಮಗೆ ತಾವೇ ಚಳುವಳಿ ಆರಂಭಿಸಿರುವುದರ ಬಗ್ಗೆ ಅವರು ತೀವ್ರ ಕಾಳಜಿ ತೋರಿಸಿದರು ಎಂದೆಲ್ಲ ವರದಿ ಮಾಡಿದ್ದಾರೆ.

ವಿವಿಧ ಚಳುವಳಿಗಳು ತೀವ್ರವಾಗಿ ಮುಂದಿನ ತಿಂಗಳುಗಳಲ್ಲಿ ದೇಶದಾದ್ಯಂತ ಗಲಭೆಯಾಗಬಹುದೆಂಬ ವರದಿಗಳು ಕೇಂದ್ರ ಸರ್ಕಾರಕ್ಕೆ ಬಂದಿವೆ ಎಂದು ಹಿಂದು ಪತ್ರಿಕೆ (ನವೆಂಬರ್ 17) ವರದಿಮಾಡಿದೆ. ನಗರದ ಅಶಾಂತಿ, ಗ್ರಾಮೀಣ ಪ್ರದೇಶಗಳಿಗೂ ಹರಡುತ್ತಿವೆ ಎಂಬುದರ ಬಗ್ಗೆ ಸರ್ಕಾರಕ್ಕೆ ತುಂಬ ಕಳವಳ ಇದೆ ಎಂದು ಹೇಳಲಾಗಿದೆ.

ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ಹರಡುತ್ತಿರುವ ಚಳುವಳಿಯ ಹಿನ್ನೆಲೆಯಲ್ಲಿ ಇದನ್ನು ಹೇಳಲಾಗಿದೆ. ಪಂಜಾಬ್ ಮತ್ತು ಮಹಾರಾಷ್ಟ್ರದ ಘಟನೆಗಳಿಂದ, ರೈತಚಳುವಳಿಯು ದೇಶದಾದ್ಯಂತ ಹರಡುವ ಸಾಧ್ಯತೆಯು ಸೂಚಿತವಾಗುತ್ತದೆ.

ಸ್ವಾಗತಾರ್ಹ ಬೆಳವಣಿಗೆ

ದೇಶದ ವಿಚಾರವಾದಿ ಅಂಶಗಳು ಈ ಬೆಳವಣಿಗೆಯನ್ನು ಸ್ವಾಗತಿಸಬೇಕು. ಸರ್ಕಾರದ ಏಕಸ್ವಾಮ್ಯಗಾರರ ಪರವಾಗಿರುವ ನೀತಿಗಳಿಗೆ ಇರುವ ಪ್ರತಿರೋಧವನ್ನು ಇದು ಬಲಪಡಿಸುತ್ತದೆ. ಆದ್ದರಿಂದಲೇ ಆರು ಪಕ್ಷಗಳ ಸಮನ್ವಯ ಸಮಿತಿಯು ಅಗತ್ಯವಸ್ತುಗಳ ಬೆಲೆ ಇಳಿಸಬೇಕು ಮತ್ತು ರೈತರಿಗೆ ಒಳ್ಳೆಯ ಬೆಲೆಗಳನ್ನು ಕೊಡಬೇಕು ಎಂದು ಒತ್ತಾಯಿಸಿದೆ. ವಿರೋಧ ಪಕ್ಷಗಳು ಮತ್ತು ಆಡಳಿತ ಪಕ್ಷವೂ ಕೂಡ ರೈತರ ಬೇಡಿಕೆಗೆ ಬೆಂಬಲ ಕೊಡುತ್ತೇವೆ ಎಂದು ಹೇಳಿಕೊಂಡಿವೆ.

ಏರುತ್ತಿರುವ ಬೆಲೆಗಳನ್ನು ಸ್ಥಗಿತಗೊಳಿಸಲು ಹೆಚ್ಚು ತುಟ್ಟಿಭತ್ಯವನ್ನು ಬೇಡುತ್ತಿರುವ ಕಾರ್ಮಿಕವರ್ಗ ಮತ್ತು

(ಕಡೇ ಪುಟ ನೋಡಿ)

ಸಂಕ್ಷಿಪ್ತ ಸಮಾಚಾರಗಳು

ಉಡುಪಿ :

ದಿನಾಂಕ 21-11-80ರಂದು ಉಡುಪಿಯಲ್ಲಿ ಲೇಬರ್ ಇಲಾಖೆಯ ಆಫೀಸ್ ಎದುರು ಸಿ.ಐ.ಟಿ.ಯು.ಗೆ ಸೇರಿದ ಕಾರ್ಮಿಕಸಂಘಗಳ ನೇತೃತ್ವದಲ್ಲಿ ಕಾರ್ಮಿಕ ಇಲಾಖೆಯ ಕಾರ್ಮಿಕ ವಿರೋಧಿನೀತಿಯನ್ನು ಪ್ರತಿಭಟಿಸಿ ಬೆಳಗ್ಗೆ 10ರಿಂದ ಸಂಜೆ 4 ಘಂಟೆಯ ವರೆಗೆ ಸಾಮೂಹಿಕ ಸತ್ಯಾಗ್ರಹ ನಡೆಯಿತು. ಈ ಸತ್ಯಾಗ್ರಹದಲ್ಲಿ ಹಂಚು, ಬೀಡಿ, ಪ್ಲೈವುಡ್, ನೇಯ್ಗೆ ಮತ್ತಿತರ ಉದ್ಯಮಗಳ ಕಾರ್ಮಿಕರು ಭಾಗವಹಿಸಿದ್ದರು.

"ಎಲ್ಲಾ ಕೈಗಾರಿಕೆಗಳಲ್ಲಿ ಕನಿಷ್ಠ ಕೂಲಿ ನಿರ್ಣಯಿಸಿ ಜಾರಿಗೊಳಿಸಬೇಕು". ಪ್ಲೈವುಡ್ ಕಾರ್ಮಿಕರಿಗೆ ನಿರ್ಣಯವಾದ ಕನಿಷ್ಠ ಕೂಲಿಯನ್ನು ಜಾರಿಗೊಳಿಸಬೇಕು ಇತ್ಯಾದಿ ಬೇಡಿಕೆಗಳನ್ನೊಳಗೊಂಡ ಮನವಿಪತ್ರವನ್ನು ಉಡುಪಿ ವಿಭಾಗದ ಲೇಬರ್ ಇನ್ಸ್‌ಪೆಕ್ಟರರಿಗೆ ಒಪ್ಪಿಸಲಾಯಿತು.

ಸಂಜೆ 4 ಘಂಟೆಯ ನಂತರ ಜರುಗಿದ ಸಭೆಯಲ್ಲಿ ಕಾಂ. ರಾಮ ಕೆ. ಕುಂದರ್, ಕೆ ಶಂಕರ, ವಿಠ್ಠಲ ಪೂಜಾರಿ ಮತ್ತು ಡೇವಿಡ್ ಕರ್ಕಡ ಮೊದಲಾದವರು ಮಾತನಾಡಿದರು.

ವಿರಾಜಪೇಟೆ :

ದಿನಾಂಕ 21-11-80 ರಂದು ರಾಜ್ಯ ಸಿ. ಐ. ಟಿ ಯು. ವಿನ ಕರೆಯ ಮೇರೆಗೆ ಸಿ ಐ ಟಿ.ಯು.ವಿಗೆ ಸೇರಿದ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ ಕಾರ್ಮಿಕರು, ಕೊಡಗಿನ ಕಾರ್ಮಿಕ ಅಧಿಕಾರಿಯವರ ಆಫೀಸಿನ ಮುಂದೆ ಧರಣಿ ಸತ್ಯಾಗ್ರಹ ಆಚರಿಸಿದರು. ಧರಣಿ ಸತ್ಯಾಗ್ರಹದ ಮೊದಲು ಸುಮಾರು ಒಂದು ಸಾವಿರಕ್ಕೂ ಹೆಚ್ಚು ಜನ ಕಾರ್ಮಿಕರು ಪಾಲ್ಗೊಂಡ ಬೃಹತ್ ಮೆರವಣಿಗೆಯನ್ನು ಮಡಿಕೇರಿಯ ಮುಖ್ಯ ಬೀದಿಗಳಲ್ಲಿ ನಡೆಸಲಾಯಿತು, ಕೊಡಗು ಜಿಲ್ಲಾ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಆರ್. ಅಶ್ವಣ್ಣ ಅವರು ಕಾರ್ಮಿಕರ ಬೇಡಿಕೆಗಳನ್ನೊಳಗೊಂಡ ಮನವಿಪತ್ರವನ್ನು ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ಅರ್ಪಿಸಿದರು.

ಕುಟ್ಟ :

ಕರ್ನಾಟಕ ಮತ್ತು ಕೇರಳವನ್ನು ಪರಸ್ಪರ ಬಂಧಿಸುವ ಪ್ರದೇಶವಾಗಿರುವ ಕೊಡಗಿನ ಕುಟ್ಟನಾಡಿನಲ್ಲಿ ದಿನಾಂಕ 25-11-80 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕಚೇರಿಯನ್ನು ಕಾಂ. ಅಶ್ವಣ್ಣನವರ ನೇತೃತ್ವದಲ್ಲಿ ಉದ್ಘಾಟಿಸಲಾಯಿತು. ಉದ್ಘಾಟನೆಗೆ ಮೊದಲು ಇನ್ನೂರಕ್ಕೂ ಹೆಚ್ಚು ಕಾರ್ಯಕರ್ತರು ಮೆರವಣಿಗೆ ನಡೆಸಿದರು. ನಂತರ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಮಂದಣ್ಣ ಮೊದಲಾದವರು ಮಾತನಾಡಿದರು.

ಕುಣಿಗಲ್ :

ಎಸ್.ಎಫ್.ಐ.ಯ ತುಮಕೂರು ಜಿಲ್ಲೆಯ ಕುಣಿಗಲ್ ಶಾಖೆಯ ವಿದ್ಯಾರ್ಥಿಗಳು ದಿನಾಂಕ 24-11-80 ರಂದು, ಕುಣಿಗಲ್ ಟೌನ್ ಸರ್ಕಾರಿ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ನಡೆಯುತ್ತಿರುವ ಭ್ರಷ್ಟಾಚರಗಳ ವಿರುದ್ಧ ಪ್ರತಿಭಟಿಸಿದರು. ಈ ಬಗ್ಗೆ ಮೆರವಣಿಗೆಯೊಂದನ್ನು ತೆಗೆದು ಬಿ. ಡಿ. ಓ. ಅವರಿಗೂ, ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಿಗೂ ತಮ್ಮ ಬೇಡಿಕೆಗಳ ಬಗ್ಗೆ ಮನವಿ ಅರ್ಪಿಸಿ ತಕ್ಷಣ ಪರಿಶೀಲಿಸಬೇಕೆಂದು ಒತ್ತಾಯಿಸಿದರು. ನಂತರ ನಡೆದ ಸಭೆಯನ್ನು ಉದ್ದೇಶಿಸಿ ಕಾಂ. ಬಿ ಜಿ. ಗಂಗಾಧರಯ್ಯ, ಕಾಂ. ಹೆಚ್. ಕೆ. ಚಿಕ್ಕರಾಮಯ್ಯ, ಮಾತನಾಡಿದರು.

ರಾಯಚೂರು :

ರಾಯಚೂರು ತಾಲ್ಲೂಕಿನ ಗುಂಜಹಳ್ಳಿಯಲ್ಲಿ ದಿನಾಂಕ 25-11-80 ರಂದು ರೈತರ ಸಭೆ ನಡೆಯಿತು. ನಗರದ ಖ್ಯಾತ ವಕೀಲ ಶ್ರೀ ಎಂ. ನಾಗಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾಂ. ಚಂದ್ರಶೇಖರಬಾಳೆಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು.

ಬರಗಾಲದ ಬವಣೆಗೆ ಸಿಲುಕಿರುವ ರೈತರ ಸಾಲವಸೂಲಿಯನ್ನು ತಕ್ಷಣ ನಿಲ್ಲಿಸಬೇಕೆಂದು ಸ್ಟೇಟ್ ಬ್ಯಾಂಕ್ ಅಧಿಕಾರಿಗಳನ್ನು ಒತ್ತಾಯಿಸಲಾಯಿತು. ಇದೇ ಸಮಯಕ್ಕೆ ಗುಂಜಹಳ್ಳಿ ಗ್ರಾಮಸಮಿತಿಯೊಂದನ್ನು ರಚಿಸಲಾಯಿತು. ಶ್ರೀ ಶೆಟ್ಟಿಮಲ್ಲಣ್ಣ ಅಧ್ಯಕ್ಷರಾಗಿರುವ 18 ಜನರ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಬೆಂಗಳೂರು :

ದಿನಾಂಕ 25-11-80 ರಂದು ಬೆಂಗಳೂರಿನಲ್ಲಿ ಬೀಡಿಕಾರ್ಮಿಕರ ಸರ್ವಸದಸ್ಯರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಮಹಮ್ಮದ್ ದಸ್ತಗೀರ್ ವಹಿಸಿದ್ದರು. ಡಿಸೆಂಬರ್ 12ರಂದು ನಡೆಯಲಿರುವ ಸಾಂಕೇತಿಕ ಮುಷ್ಕರವನ್ನು ಯಶಸ್ವಿ ಮಾಡಬೇಕೆಂದು ನಿರ್ಣಯಿಸಲಾಯಿತು ಪ್ರಾರಂಭದಲ್ಲಿ ಸಂಘಟನೆ, ಕಾರ್ಯಚಟುವಟಿಕೆಗಳ ಬಗ್ಗೆ ಕಾಂ. ಸಯ್ಯದ್ ಜಲೀಲ್ ವಿವರಿಸಿದರು ಬಹುಸಂಖ್ಯಾತ ಮಹಿಳೆಯರು ಭಾಗವಹಿಸಿದ್ದ ಸಭೆಯನ್ನು ಉದ್ದೇಶಿಸಿ ಕಾಂ. ಮಹಬೂಬ್‌ಬಿ, ಕಾಂ. ಅಜೀಜ್ ಶರೀಫ್ ಮೊದಲಾದವರು ಮಾತನಾಡಿದರು.

ಮೈಸೂರು :

ದಿನಾಂಕ 26-11-80 ರಂದು ಮೈಸೂರು ತಾಲ್ಲೂಕು ಶ್ರೀರಂಗಪಟ್ಟಣದ ಬಳಿ ಇರುವ ಕೇಂದ್ರ ರೇಷ್ಮೆ ಸಂಶೋಧನಾಲಯ ಮತ್ತು ಶಿಕ್ಷಣಾಲಯದ ಕಾರ್ಮಿಕರ ಬಹಿರಂಗ ಸಭೆ ನಡೆಯಿತು. ರೇಷ್ಮೆ ಸಂಶೋಧನಾಲಯದ ಡೈರೆಕ್ಟರರು ಅನುಸರಿಸುತ್ತಿರುವ ಕಾರ್ಮಿಕ ವಿರೋಧಿನೀತಿಯನ್ನು ಪ್ರತಿಭಟಿಸಲಾಯಿತು. ಸಭೆಯನ್ನು ಉದ್ದೇಶಿಸಿ ಎಂ. ಮಹದೇವ, ಕಾಂ. ಶೇಖರ ಮೊದಲಾದವರು ಮಾತನಾಡುತ್ತಾ ಜೀತದಾಳುಗಳಂತೆ ಕಾರ್ಮಿಕರನ್ನು ನಡೆಸಿಕೊಳ್ಳುತ್ತಿರುವುದನ್ನು ಉಗ್ರವಾಗಿ ಪ್ರತಿಭಟಿಸಿದರು. 1-4-79ರಂದು ಕಾರ್ಮಿಕಸಂಘಕ್ಕೂ, ಡೈರೆಕ್ಟರರ ನಡುವೆ ಆದ ಒಪ್ಪಂದದ ಪ್ರಕಾರ ಒಂದು ರೂಪಾಯಿ ಕೂಲಿ ಹೆಚ್ಚಳವನ್ನು ತಕ್ಷಣ ಜಾರಿಮಾಡಬೇಕೆಂದು ಒತ್ತಾಯಿಸಲಾಯಿತು.

ಮಂಗಳೂರು :

ಮಂಗಳೂರು ಬೀಡಿಕೆಲಸಗಾರರ ಸಂಘದ 9ನೇ ಡಿವಿಜನ್ನಿನ ಬೀಡಿಕಾರ್ಮಿಕರ ಸಭೆಯು ದಿನಾಂಕ 28-11-80 ರಂದು ಕಾಂ. ಅನಂತ ಕೋಟ್ಯಾನ್‌ನವರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಘದ ಕಾರ್ಯದರ್ಶಿ ಕಾಂ. ಜೆ. ಬಿ. ಬೀಡಿಕಾರ್ಮಿಕರ ಪರಿಸ್ಥಿತಿಯನ್ನು ವಿವರಿಸಿದರು

ನಂತರ ಕಾಂ ಖಾದ್ರಿಯವರು ಕಾರ್ಯದರ್ಶಿಯಾಗಿರುವ 26 ಜನರ ಪ್ರಾದೇಶಿಕ ಸಮಿತಿಯನ್ನು ರಚಿಸಲಾಯಿತು.

○

ಅಡಿಕೆ ಮತ್ತು ಏಲಕ್ಕಿ ಮಹಿಳಾ ಕಾರ್ಮಿಕರ ಯಶಸ್ವಿ ಮುಷ್ಕರ

ದ. ಕ. ಜಿಲ್ಲೆಯ ಮಂಗಳೂರು ನಗರದಲ್ಲಿ ಏಲಕ್ಕಿ ಮತ್ತು ಅಡಿಕೆಯ ಮಹಿಳಾ ಕಾರ್ಮಿಕರು ಬಹಳ ಸಂಖ್ಯೆಯಲ್ಲಿದ್ದು, ಅವರ ಕೂಲಿ ಮತ್ತು ಇತರ ಸವಲತ್ತುಗಳ ಬಗ್ಗೆ ಮಾಡಿಕೊಂಡಿದ್ದ ಒಪ್ಪಂದವು ಮಾರ್ಚ್ ತಿಂಗಳಲ್ಲಿ ಕೊನೆಗೊಂಡಿತು. ಏಪ್ರಿಲ್ ಒಂದನೇ ತಾರೀಕಿನಿಂದ ಕಾರ್ಮಿಕರು ಹೊಸ ಬೇಡಿಕೆಗಳನ್ನು ಮಾಲೀಕರ ಮುಂದಿಟ್ಟರು. ಆರು ತಿಂಗಳ ಕಾಲ ಈ ವಿವಾದ ಮಾತುಕತೆಯಲ್ಲೇ ಮುಂದುವರೆಯಿತು.

ಇದರಿಂದ, ಮಾಲೀಕರು ಅನುಸರಿಸುತ್ತಿರುವ ಕಾರ್ಮಿಕ ವಿರೋಧಿ ನೀತಿಯನ್ನು ಮತ್ತು ವಿಳಂಬ ನೀತಿಯನ್ನು ಕಾರ್ಮಿಕರು ಪ್ರತಿಭಟಿಸುವುದು ಅನಿವಾರ್ಯವಾಯಿತು. ಸೆಪ್ಟಂಬರ್ 29 ರಿಂದ ಎರಡು ಗಂಟೆಗಳ ಕಾಲ ಕೆಲಸ ಸ್ಥಗಿತಗೊಳಿಸುವ ಚಳುವಳಿಯನ್ನು ಸಿಐಟಿಯು, ಎಐಟಿಯುಸಿ, ಮತ್ತು ಬಿಎಂಎಸ್‌ಗೆ ಸೇರಿದ ಕಾರ್ಮಿಕರು ಜಂಟಿಯಾಗಿ ನಡೆಸಿದರು. ಇದರಿಂದ ಎಚ್ಚೆತ್ತ ಮಾಲೀಕರು ಹೊಸ ಒಪ್ಪಂದಕ್ಕೆ ಬಂದರು. ಆದರೆ ಹಳೆ ಒಪ್ಪಂದ ಮತ್ತು ಹೊಸ ಒಪ್ಪಂದಗಳ ನಡುವಿನ 6 ತಿಂಗಳ ಬಾಕಿ ವೇತನವನ್ನು ನೀಡಲು ಮಾಲೀಕರು ನಿರಾಕರಿಸಿದ್ದರಿಂದ ಮತ್ತೆ ಅನಿರ್ದಿಷ್ಟ ಕಾಲ ಜಂಟಿ ಮುಷ್ಕರ ನಡೆಯಿತು. ಜಿಲ್ಲಾ ಕಾರ್ಮಿಕ ಅಧಿಕಾರಿ ಮತ್ತು ಹಂಗಾಮಿ ಅಸಿಸ್ಟೆಂಟ್ ಲೇಬರ್ ಕಮೀಷನರು ಮಧ್ಯಪ್ರವೇಶಿಸಿ, ವೇತನ ಪರಿಷ್ಕರಣವನ್ನು ಸೂಚಿಸಿದರು. ಇದಕ್ಕೆ ಏಲಕ್ಕಿ ಮಾಲೀಕರು ಒಪ್ಪಿಕೊಂಡದ್ದರಿಂದ ಏಲಕ್ಕಿ ಮಹಿಳಾ ಕಾರ್ಮಿಕರು ಮುಷ್ಕರ ನಿಲ್ಲಿಸಿ ತಮ್ಮ ಬೇಡಿಕೆಯ ಹೋರಾಟದಲ್ಲಿ ಯಶಸ್ವಿಯಾದರು. ಆದರೆ ಅಡಿಕೆ ಮಾಲೀಕರು ಹಿಂದಿನ 6 ತಿಂಗಳ ವೇತನ ನೀಡಲು ನಿರಾಕರಿಸಿದರು. ಆದ್ದರಿಂದ ಅಡಿಕೆಯ ಮಹಿಳಾ ಕಾರ್ಮಿಕರು ಮುಷ್ಕರ ಮುಂದುವರೆಸಿದರು. ಮಾಲೀಕರ ಬೇರೆ ಪ್ರಯತ್ನಗಳನ್ನು ವಿಫಲಗೊಳಿಸಿದಾಗ ಹಂಗಾಮಿ ಅಸಿಸ್ಟೆಂಟ್ ಲೇಬರ್ ಕಮೀಷನರು ಮಧ್ಯಪ್ರವೇಶಿಸಿ ಒಪ್ಪಂದ ನಡೆಸಿದರು. ಯಶಸ್ವಿಯಾದ್ದರಿಂದ ಅಡಿಕೆ ಮಹಿಳಾ ಕಾರ್ಮಿಕರೂ ಮುಷ್ಕರ ನಿಲ್ಲಿಸಿದ್ದಾರೆ.

ಚಳುವಳಿಗೆ ಸಿದ್ಧರಾಗಲು ಹೆಂಚಿನ ಕಾರ್ಮಿಕರಿಗೆ ಕರೆ

ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್‌ನ 37ನೇ ವಾರ್ಷಿಕ ಸಭೆಯು ತಾ. 9-11-1980ರಂದು ಮಂಗಳೂರಿನ ಯೂನಿಯನ್ ಕಛೇರಿಯಲ್ಲಿ ನಡೆಯಿತು, ಕಾಂ. ಬಿ ನಾರಾಯಣ ಅಧ್ಯಕ್ಷತೆ ವಹಿಸಿದ್ದರು, ಇತ್ತೀಚೆಗೆ ನಿಧನರಾದ ಮುಖಂಡರಾದ ಕಾಂ. ಎ. ಕೆ. ನಾರಾಯಣ, ಕಾಂ. ಸುಧೀರ್ ಮಲ್ಲಿಕ್ ಚೌಧುರಿ, ಕಾಂ. ದಿನೇಶ್ ಭಟ್ಟಾಚಾರ್ಯ, ಕಾಂ. ಬಾಲನ್, ಕಾಂ. ರಂಗರಾವ್ ತಲಚೇರಿಕರ್ ಮತ್ತು ಇತರ ದಿವಂಗತ ಯೂನಿಯನ್ ಸದಸ್ಯರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಪ್ರಧಾನ ಕಾರ್ಯದರ್ಶಿ ಕಾಂ. ಕೊರಗಪ್ಪ ರೈ ವರ್ಷದ ವರದಿಯನ್ನು ಮಂಡಿಸಿದರು. ಸಭೆಗೆ ಆಗಮಿಸಿದ್ದ ದ ಕ ಜಿಲ್ಲಾ ಸಿ. ಪಿ ಐ (ಎಂ.) ಸಮಿತಿ ಕಾರ್ಯದರ್ಶಿ ಕಾಂ ಕೆ. ಆರ್ ಶ್ರೀಯಾನ್ ಪ್ರೆಸ್ ವರ್ಕರ್ಸ್ ಯೂನಿಯನ್‌ನ ಉಪಾಧ್ಯಕ್ಷ ಕಾಂ ಉಮಾನಾಥ್ ಹಂಚಿನ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಸಭೆಯಲ್ಲಿ ಟೈಲ್ ವರ್ಕರ್ಸ್ ಯೂನಿಯನ್‌ಗೆ ಕಾಂ. ಪಿ. ರಾಮಚಂದ್ರ ರಾವ್ ಅವರನ್ನು ಅಧ್ಯಕ್ಷರನ್ನಾಗಿ, ಕಾಂ. ಕೆ.ಆರ್. ಶ್ರೀಯಾನ್, ಕಾಂ ಕೆ. ಮೂಸಬ್ಬ, ಕಾಂ ಬಿ. ನಾರಾಯಣ ಅವರನ್ನು ಉಪಾಧ್ಯಕ್ಷರನ್ನಾಗಿ, ಕಾಂ. ಬಿ. ಕೊರಗಪ್ಪ ರೈ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ, ಕಾಂ. ಗಂಗಾಧರ ಶೆಟ್ಟಿ ಕಾಂ. ಶಿವ ಜಿ, ಕಾಂ. ಸಿ. ನಾರಾಯಣ ಅವರನ್ನು ಜೊತೆ ಕಾರ್ಯದರ್ಶಿಗಳನ್ನಾಗಿ ಕಾಂ. ಅಬ್ರಹಾಂ ಕರ್ಕಡ ಅವರನ್ನು ಕೋಶಾಧಿಕಾರಿಯಾಗಿ ಚುನಾಯಿಸಲಾಯಿತು.

●

ಬೆಲೆಏರಿಕೆಯ ಕಾವಿನಿಂದ ಕಂಗಾಲಾಗಿದ್ದ ಮಹಿಳೆಯರಿಗೆ ಪೋಲೀಸರ ಲಾಠಿ ಅಶ್ರುವಾಯುಗಳು ಉತ್ತರವಲ್ಲ!

ದಿನಾಂಕ 26-11-1980 ರಂದು ಹುಬ್ಬಳ್ಳಿಯ ಹೆಂಗಸರು ಬೆಲೆ ಇಳಿಸಬೇಕೆಂದು ತಹಸೀಲ ಕಛೇರಿಗೆ ಹೋದಾಗ ಪೋಲೀಸರು ಅವರ ಮೇಲೆ ಲಾಠಿ ಅಶ್ರುವಾಯುಗಳ ಪ್ರಯೋಗ ಮಾಡಿದ್ದು ತೀರ ಖಂಡನಾರ್ಹ ಕೃತಿಯಾಗಿದೆ

ದೆಹಲಿಯ ಪೋಲೀಸರು ಕುರುಡರ ಮೇಲೆ ಕೈ ಮಾಡಿದರೆ ಹುಬ್ಬಳ್ಳಿಯ ಪೋಲೀಸರು ಹೆಂಗಸರ ಮೇಲೆ ಮತ್ತು ಮಕ್ಕಳ ಮೇಲೆ ಕೈಮಾಡಿ ತಮ್ಮ 'ಪೌರುಷ'ವನ್ನು ತೋರಿಸಿದ್ದಾರೆ,

ಇಂದು ಎಚ್ಚೆತ್ತ ಮಹಿಳಾ ಜನಾಂಗ ಬೆಲೆ ಏರಿಕೆಯ ಭಾರ ತಾಳಲಾರದೆ ಪ್ರಶ್ನಿಸಿದಾಗ ಅವರಿಗೆ ದೊರಕಿದ್ದು ಅಶ್ರುವಾಯುವಿನ ಅನುಭವ ಮತ್ತು ಲಾಠಿಯ ಏಟುಗಳು ಸರಕಾರ ಹೀಗೆ ಕಂಗಾಲಾಗಿದ್ದ ಮಹಿಳೆಯರಿಗೆ ಲಾಠಿಯಿಂದ ಉತ್ತರಿಸುವದು ಸಮಂಜಸವಲ್ಲ 300ಕ್ಕೂ ಹೆಚ್ಚಾಗಿದ್ದ ಮಹಿಳಾ ಪ್ರದರ್ಶನಕಾರರ ಮೇಲೆ ಲಾಠಿ ಪ್ರಹಾರ ಮಾಡಿ ಬಂಧಿಸುವದು ಬೆಲೆ ಏರಿಕೆಯನ್ನು ತಡೆಯುವ ಮಾರ್ಗವಲ್ಲವೆಂದು ಅವರು ಗಮನಿಸಿ, ಅದಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಿ ಈಗಾಗಲೇ ಬಂಧಿಸಲಾದ ವ್ಯಕ್ತಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಮಹಿಳಾ ವಿಮೋಚನಾ ಸಂಘಟನಾ ಸಮಿತಿ ಗುಲಬರ್ಗಾ ಪರವಾಗಿ ಕಾಂ. ಕೆ. ಷರೀಫಾ ಒತ್ತಾಯಿಸಿದ್ದಾರೆ.

○

ಬಿಜಾಪುರ ಜಿಲ್ಲೆ ಬರಗಾಲವೆಂದು ಸಾರಲೇ ಬೇಕು

ಜಿಲ್ಲಾ ರೈತ ಸಂಘದ ಚಳುವಳಿ

ಬಿಜಾಪುರ ಜಿಲ್ಲೆಯಲ್ಲಿ ಈ ವರ್ಷ 5 ಇಂಚಿಗಿಂತಲೂ ಕಡಿಮೆ ಮಳೆಯಾಗಿರುವುದರಿಂದ ಮುಂಗಾರು ಬೆಳೆ ಸಂಪೂರ್ಣ ಒಣಗಿದೆ. ಹಿಂಗಾರಿ ಬೆಳೆ ಒಣಗುತ್ತಿದೆ. ಸಾವಿರಾರು ಎಕರೆ ಭೂಮಿಯಲ್ಲಿ ಬಿತ್ತನೆಯಾಗದೆ ಪಡಬಿದ್ದಿದೆ. ಪ್ರತಿದಿನ ಸಾವಿರಾರು ಜನ ಊರುಬಿಟ್ಟು ಹೋಗುತ್ತಿದ್ದಾರೆ. ಮೇವಿಲ್ಲದೆ ದನಕರುಗಳ ಪರಿಸ್ಥಿತಿ ಕಂಗಾಲಾಗಿದೆ. ಕುಡಿಯುವುದಕ್ಕೆ ನೀರಿಲ್ಲದಂತಾಗಿದೆ. ಜಿಲ್ಲೆಯಾದ್ಯಂತ ಇಂಥ ಗಂಭೀರ ಪರಿಸ್ಥಿತಿ ಇರುವಾಗ ಆಳುವ ಪಕ್ಷ ಹಾಗೂ ಸರಕಾರ ನಿಷ್ಕ್ರಿಯವಾಗಿರುವಾಗ ಬಿಜಾಪುರ ಜಿಲ್ಲಾ ರೈತಸಂಘ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ರೈತರ ಗಂಭೀರ ಸಮಸ್ಯೆಯತ್ತ ಸರಕಾರದ ಗಮನ ಸೆಳೆಯಲು ಹೋರಾಟ ನಡೆಸಿದೆ.

ತಾ. 20ರಂದು ಸಾವಿರಾರು ರೈತರು ಬಿಜಾಪುರದಲ್ಲಿ ಪ್ರಚಂಡ ಮೆರವಣಿಗೆ ತೆಗೆದು ತಹಶೀಲ್ದಾರರಿಗೂ, ಜಿಲ್ಲಾಧಿಕಾರಿಗಳಿಗೂ ಘೆರಾವೋ ಮಾಡಿ ಜಿಲ್ಲೆಯನ್ನು ಬರಗಾಲವೆಂದು ಸಾರಬೇಕು, ಆಲಮಟ್ಟಿ ಯೋಜನೆಯನ್ನು ಪೂರ್ಣಗೊಳಿಸಬೇಕು, ಅದರ ಅಂಗವಾಗಿ ಇಂಡಿ, ಸಿಂದಗಿ, ಬಾಗೇವಾಡಿ, ಮುದ್ದೆಬಿಹಾಳ ತಾಲ್ಲೂಕುಗಳಲ್ಲಿ ಕಾಲುವೆ ಕೆಲಸ ಪ್ರಾರಂಭಿಸಿ ಕೂಲಿಗೆ-ಕಾಳು ಕಾರ್ಯಕ್ರಮ ಪ್ರಾರಂಭಿಸಬೇಕು, ರೈತರಿಗೆ ಮೇವು ಒದಗಿಸಬೇಕು, ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು, ರಾಷ್ಟ್ರೀಕೃತ ಬ್ಯಾಂಕನ್ನೊಳಗೊಂಡ ಎಲ್ಲ ಸಾಲ ರದ್ದು ಮಾಡಿ, ಶೇ. 4ರಂತೆ ಬಡ್ಡಿಯಲ್ಲಿ ಹೊಸ ಸಾಲ ಮಂಜೂರ ಮಾಡಬೇಕು, 25 ಎಕರೆಯವರೆಗೆ ಚಿಕ್ಕ ಹಿಡುವಳಿದಾರರೆಂದು ಪರಿಗಣಿಸಬೇಕು, ಭೂಕಂದಾಯ ಸಂಪೂರ್ಣ ರದ್ದುಗೊಳಿಸಬೇಕೆಂಬ ಬೇಡಿಕೆಗಳ ಮನವಿಗಳನ್ನರ್ಪಿಸಿದರು. ಕೋರ್ಟ್ ಫೀ ಸ್ಟ್ಯಾಂಪ್‌ಗಳಿಲ್ಲದ ಅರ್ಜಿಗಳನ್ನು ಸ್ವೀಕರಿಸಬೇಕೆಂದೂ, ಸೊಸೈಟಿ, ಬ್ಯಾಂಕ್ ಸಾಲ ತುಂಬಲಾರದ ಹೊಲಗಳನ್ನು ಸರಕಾರದ್ದೆಂದು ಪರಿಗಣಿಸಿದ್ದನ್ನು ರದ್ದು ಮಾಡಿ ರೈತನ ಹೆಸರು ದಾಖಲು ಮಾಡಬೇಕೆಂದೂ ಕೇಳಿಕೊಳ್ಳಲಾಯಿತು.

ಬರಗಾಲವೆಂದು ಸಾರಲು ಸರಕಾರಕ್ಕೆ ಶಿಫಾರಸು ಮಾಡುತ್ತೇವೆ, ಬರಗಾಲ ಕಾಮಗಾರಿ ಕೈಗೊಳ್ಳುತ್ತೇವೆ. ಮೇವು ಒದಗಿಸುತ್ತೇವೆ. ಅರ್ಜಿಗಳಿಗೆ ಕೋರ್ಟ್ ಫೀ ಸ್ಟ್ಯಾಂಪ್ ಹಚ್ಚುವುದನ್ನು ಮಾಫಿ ಮಾಡುತ್ತೇವೆಂಬ ಆಶ್ವಾಸನೆಗಳನ್ನು ಅಧಿಕಾರಿಗಳಿತ್ತನಂತರ ಮತಪ್ರದರ್ಶನಗಾರರು ಬಸವೇಶ್ವರ ಚೌಕಿಗೆ ಬಂದು ಸಾರ್ವಜನಿಕ ಸಭೆಯಲ್ಲಿ ಪರ್ಯವಸಾನಗೊಂಡಿತು.

ಕುಂಭಕರ್ಣ 6 ತಿಂಗಳು ನಿದ್ರೆ ಮಾಡುತ್ತಿದ್ದ. ಆದರೆ ಭಾರತದ ರೈತ 33 ವರ್ಷ ನಿದ್ರೆಯಲ್ಲಿದ್ದ. ಕಾಂಗ್ರೆಸ್ ಸರಕಾರದ ರೈತವಿರೋಧಿ ಆರ್ಥಿಕ ನೀತಿಯಿಂದಾಗಿ ಬಡವನಾಗಿಯೇ ಉಳಿದ ರೈತ, ಕರಭಾರದಿಂದ ಬೆಳೆದ ಬೆಳೆಗೆ ಸಿಗುವ ಅಲ್ಪ ಬೆಲೆಯಿಂದ ಸಂಕಟಕ್ಕೊಳಗಾದ ಗ್ರಾಮಾಂತರದ ಹುಲಿ ಈಗ ಎಚ್ಚತ್ತಿದೆ. ಜಾಗ್ರತರಾಗುತ್ತಿದ್ದಾರೆ ಹೊಲದಲ್ಲಿ ದುಡಿಯುವ ರೈತರು, ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ಪಂಜಾಬ್ ಮತ್ತಿನ್ನಿತರ ಪ್ರಾಂತಗಳ ರೈತರು ಈಗಾಗಲೇ ಎಚ್ಚರಗೊಂಡಿದ್ದು ಹೋರಾಟಕ್ಕಿಳಿದಿದ್ದಾರೆ. ಸರಕಾರ ಅವರ ಬೇಡಿಕೆಗಳನ್ನು ಮನ್ನಿಸದೆ, ರೈತರನ್ನು ಕೊಲೆಮಾಡುತ್ತಿದೆ, ದಬ್ಬಾಳಿಕೆ ನಡೆಸುತ್ತಿದೆ. ಇಂಥ ದಬ್ಬಾಳಿಕೆಯನ್ನೆದುರಿಸಲು ರೈತರೆಲ್ಲ ಒಗ್ಗಟ್ಟಾಗಿ, ಇತರ ಪ್ರಜಾಪ್ರಭುತ್ವ ಶಕ್ತಿಗಳ ಜೊತೆಯಲ್ಲಿ ಸೇರಿ ಐಕ್ಯಹೋರಾಟ ನಡೆಸಬೇಕೆಂದು ಕರ್ನಾಟಕ ರಾಜ್ಯ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ ಪಿ. ರಾಮಚಂದ್ರರಾವ್ ಅವರು ಸಾರ್ವಜನಿಕ ಸಭೆಯಲ್ಲಿ ಗುಡುಗಿದರು. ಬಿಜಾಪುರ ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಭೀಮಸಿ ಕಲಾದಗಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಎನ್. ಕೆ. ಉಪಾಧ್ಯಾಯ, ಡಿ. ಎಂ. ಖಲಾಸಿ ಮೊದಲಾದವರು ಭಾಷಣ ಮಾಡಿದರು. ರೈತಸಂಘದ ಕಾರ್ಯದರ್ಶಿ ಎಂ. ಪಿ. ಗಣಿಯಾರ ಸ್ವಾಗತಿಸಿದರು. ಕಾಂ. ಜಿ ಕ್ರಿಯಾಸಾಬ ಕಾಲೇಬಾಗ, ವಿ.ಎಂ. ಸೊನ್ನದ ಮೊದಲಾದವರೂ ಮತಪ್ರದರ್ಶನದಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಸೀಕ್ಯಾಬ ಮಹಿಳಾ ಕಾಲೇಜಿನ ಶಿಕ್ಷಕರೆಲ್ಲ ತಮ್ಮ ಬೇಡಿಕೆಗಳ ಸಲುವಾಗಿ ಆಮರಣ ಉಪವಾಸ ಕೈಗೊಂಡಿದ್ದು, ಅವರ ಬೆಂಬಲಾರ್ಥ ಸಾವಿರಾರು ರೈತರು ಅನ್ನಸತ್ಯಾಗ್ರಹದ ಸ್ಥಳಕ್ಕೆ ಹೋಗಿ ಅವರಿಗೆ ಸಂಪೂರ್ಣ ಬೆಂಬಲ ನೀಡಿ ಹೋರಾಟಕ್ಕೆ ಯಶಸ್ಸು ಕೋರಿದರು. ಆನಂತರ ಸರಕಾರಿ ಕಾಲೇಜಿಗೆ ತೆರಳಿ ಅಲ್ಲಿ ಪ್ರಾಥಮಿಕ ಶಿಕ್ಷಕರನ್ನು ನೇಮಿಸುವ ಸಮಿತಿ ಶಿಕ್ಷಕರ ಸಂದರ್ಶನ ತೆಗೆದುಕೊಳ್ಳುವಲ್ಲಿಯೂ ಮತಪ್ರದರ್ಶನ ಮಾಡಿದರು. ಪ್ರಾಥಮಿಕ ಶಾಲೆಯ ಒಬ್ಬ ಶಿಕ್ಷಕನನ್ನು ನೇಮಿಸಲು ಸಮಿತಿ ಸದಸ್ಯರು 5 ರಿಂದ 10 ಸಾವಿರ ರೂಪಾಯಿ ಬೇಡುತ್ತಾರೆಂದು ತಿಳಿದ ಕೂಡಲೇ ಈ ಮತಪ್ರದರ್ಶನ ನಡೆಯಿತು. ಶಿಕ್ಷಕರನ್ನು ನೇಮಿಸುವುದರಲ್ಲಿ ಹಣ ತಿಂದದ್ದು ಗೊತ್ತಾದರೆ, ಇಡೀ ಯಾದಿಯನ್ನೇ ಸುಟ್ಟುಹಾಕಲಾಗುವುದೆಂಬ ಎಚ್ಚರಿಕೆಯನ್ನು ಕೊಡಲಾಯಿತು.

ಬಸವನ ಬಾಗೇವಾಡಿ :

ತಾ. 21ರಂದು 5000 ರೈತರು ಕೆಂಬಾವುಟ ಹಿಡಿದು ಘೋಷಣೆ ಮಾಡುತ್ತಾ ಬಸವನ ಬಾಗೇವಾಡಿ ನಗರದಲ್ಲಿ ಸುತ್ತಾಡಿ ತಹಸೀಲ್ದಾರರಿಗೆ ಘೆರಾವೋ ಮಾಡಿ ಮನವಿಯನ್ನರ್ಪಿಸಿದರು. ರೈತರು ಕೊಡುವ ಅರ್ಜಿಗೆ ಸ್ಟ್ಯಾಂಪ್ ಫೀ ರದ್ದುಮಾಡುವುದಾಗಿಯೂ, ಕೂಡಲೇ ಬರಗಾಲ ಕಾಮಗಾರಿ ಕೈಗೊಳ್ಳುತ್ತೇವೆಂದು ತಹಸೀಲ್ದಾರರು ಹೇಳಿದರು. ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ರಾಜ್ಯ ರೈತ ಸಂಘದ ಕಾರ್ಯದರ್ಶಿ ಪಿ. ರಾಮಚಂದ್ರರಾವ್, ಭೀಮಸಿ ಕಲಾದಗಿ, ಡಿ. ಎಂ ಖಲಾಸಿ, ಎನ್.ಕೆ. ಉಪಾಧ್ಯಾಯ ಭಾಷಣ ಮಾಡಿದರು. ಶ್ರೀ ಬಿ ಎಸ್. ಪಾಟೀಲ, ವಕೀಲರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಹನುಮಂತ ಬಾಗೇವಾಡಿಯವರು ಅಭಾರ ಮನ್ನಿಸಿದರು.

ರೈತ ಆಹಾರ ಧಾನ್ಯವನ್ನಷ್ಟೇ ಅಲ್ಲ ಕೈಗಾರಿಕೋದ್ಯಮಗಳಿಗೂ ಕಚ್ಚಾ ಮಾಲು ಒದಗಿಸುತ್ತಾನೆ. ಕೈಗಾರಿಕೋದ್ಯಮಗಳಿಂದ ತಯಾರಾದ ವಸ್ತುಗಳ ಬೆಲೆ ಒಂದೇ ಸಮನೆ ಹೆಚ್ಚುಗುತ್ತಿದ್ದು ಉದ್ಯಮಿಗಳು ಅಪಾರ ಲಾಭ ಗಳಿಸುತ್ತಿರುವಾಗ ಕಚ್ಚಾ ಮಾಲು ಬೆಳೆಯುವ ರೈತನಿಗೆ ಬೆಳೆಗಳಿಗೆ ಬೆಲೆ ಹೆಚ್ಚಾಗದಿರುವುದರಿಂದ ಅವ ದರಿದ್ರನಾಗಿಯೇ ಉಳಿದು ಮತ್ತೂ ಬಡವನಾಗುತ್ತಿದ್ದಾನೆ. ಈ ಕಾರಣದಿಂದಲೇ ರೈತರ ಸಾಲವೆಲ್ಲ ರದ್ದಾಗಬೇಕು, ಅವನಿಗೆ ಅಗ್ಗ ಬಡ್ಡಿಯ ಹೊಸ ಸಾಲಸಿಗಬೇಕೆಂದು ರೈತಸಂಘ ಕೇಳುತ್ತಿದೆಂದು ರೈತಸಂಘದ ಪ್ರಧಾನ ಕಾರ್ಯದರ್ಶಿ ಪಿ ರಾಮಚಂದ್ರರಾವ್ ಅವರು ತಮ್ಮ ಭಾಷಣದಲ್ಲಿ ರೈತರ ಸಾಲವೆಲ್ಲ ರದ್ದಾಗಲೇಬೇಕೆಂದು ಒತ್ತಾಯಿಸಿದರು. ಕೈಗಾರಿಕೋದ್ಯಮಿಗಳಿಗೆ ಶೇ 4 ಬಡ್ಡಿಯಂತೆ ಸಾಲ ಒದಗಿಸಿ, ಉದ್ಯಮದಲ್ಲಿ ಹಾನಿಯಾಗಿದೆಂದು ಸುಳ್ಳನೆಪ ಹೇಳಿದಾಗ ಅವರ ಸಾಲವನ್ನೆಲ್ಲ ರದ್ದುಪಡಿಸುವ ಇಂದಿರಾ ಕಾಂಗ್ರೆಸ್ ಸರಕಾರ ಮಳೆಯಿಲ್ಲದೆ, ಬೆಳೆದ ಬೆಳೆಗೆ ಧಾರಣೆಯಿಲ್ಲದೆ ಹಾನಿಗೀಡಾಗಿರುವ ರೈತರ ಸಾಲ ಮನ್ನಾ ಮಾಡಲು ನಿರಾಕರಿಸುತ್ತಿರುವುದನ್ನೂ ಖಂಡಿಸಿ ರೈತರು ಐಕ್ಯತೆಯಿಂದ ಹೋರಾಡಬೇಕೆಂದು ಕರೆಕೊಟ್ಟರು.

ವರದಿ : ಎನ್. ಕೆ. ಉಪಾಧ್ಯಾಯ

ದೇವದುರ್ಗ ತಾಲ್ಲೂಕು ರೈತರು ಹೋರಾಟದತ್ತ

ರಾಯಚೂರು ಜಿಲ್ಲೆಯಲ್ಲಿ ತುಂಗಭದ್ರಾ ಎಡದಂಡೆ ಕಾಲುವೆ ಒಡೆದು ನೀರಾವರಿ ಪ್ರದೇಶದಲ್ಲಿ ಬೆಳೆ ಒಣಗಿ ರೈತರು ಸಂಕಷ್ಟಕ್ಕೀಡಾಗಿದ್ದಾರೆ. ಆಯಕಟ್ಟು ಪ್ರದೇಶದಲ್ಲಿ ಮಳೆ ಇಲ್ಲದೇ ಮುಂಗಾರು ಬೆಳೆ ಪೂರ್ತಿ ನಾಶವಾಗಿದ್ದು ಹಿಂಗಾರಿ ಬೆಳೆಯ ಬಿತ್ತನೆ ಕೂಡಾ ಆಗಿಲ್ಲ. ಹೊಟ್ಟೆಗೆ ಹಿಟ್ಟಿಲ್ಲದ ರೈತರು, ಕೃಷಿ ಕೂಲಿಗಾರರು ಬವಣೆ ಪಡುತ್ತಿದ್ದಾರೆ ಪರಿಹಾರ ಕಾಮಗಾರಿ ಪ್ರಾರಂಭಿಸದೆ ಸರಕಾರ ಕೈಕಟ್ಟಿ ಕುಳಿತಿದೆ.

ಇಷ್ಟು ದಿನ ತಮ್ಮ ಸಂಕಷ್ಟಗಳಿಗಾಗಿ ದೈವವನ್ನು ನಿಂದಿಸುತ್ತಿದ್ದ ಜಿಲ್ಲೆಯ ರೈತರು ಸಂಘಟಿತರಾಗಲು ಪ್ರಾರಂಭಿಸಿದ್ದಾರೆ ರಾಜ್ಯದಲ್ಲಿ ಬೆಳೆಯುತ್ತಿರುವ ಚಳುವಳಿಯ ಬಗ್ಗೆ ಆಸಕ್ತಿ ತೋರಿಸುತ್ತಿದ್ದಾರೆ,

ದೇವದುರ್ಗ ತಾಲ್ಲೂಕಿನ ಮಸರಕಲ್ಲ ಗ್ರಾಮದ ರೈತರು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗತೊಡಗಿರುವರು. 24- 0-80 ರಂದು ಗ್ರಾಮದ ರೈತರು ಸಭೆಯನ್ನು ಸೇರಿ ತಮ್ಮ ಕಷ್ಟಪರಿಹಾರಕ್ಕಾಗಿ ಹೋರಾಟ ಪ್ರಾರಂಭಿಸುವ ಪಣ ತೊಟ್ಟರ. ಆ ಸಭೆಯ ಅಧ್ಯಕ್ಷತೆಯನ್ನು ಕಾಂ. ಚಂದ್ರಶೇಖರ ಬಳಿಯವರು ವಹಿಸಿದ್ದರು. ನವೆಂಬರ್ 3 ರಂದು ನೂರಾರು ರೈತರು ಮೊಟ್ಟಮೊದಲ ಬಾರಿಗೆ ಹನ್ನೆರಡು ಮೈಲು ದೂರದಲ್ಲಿರುವ ತಾಲ್ಲೂಕು ಕೇಂದ್ರಕ್ಕೆ ಕಾಲ್ನಡಿಗೆಯಲ್ಲಿ ಮೆರವಣಿಗೆಯಲ್ಲಿ ಬಂದು ತಹಸೀಲ್ದಾರರಿಗೆ ಮನವಿ ಅರ್ಪಿಸಿದರು. ತಕ್ಷಣ ಕೆಲಸವನ್ನು ಒದಗಿಸಬೇಕೆಂದು, ಕಂದಾಯ ಮಾಫಿ ಮಾಡಬೇಕೆಂದೂ ಒತ್ತಾಯಪಡಿಸಿದರು. ಈ ಮೆರವಣಿಗೆಯ ನೇತೃತ್ವವನ್ನು ಕಾಂ. ಬಾಳಿ, ಸ್ಥಳೀಯ ವಕೀಲ ಶ್ರೀ ವೀರನಗೌಡರು ವಹಿಸಿದ್ದರು. ತಾಲೂಕ ಬೋರ್ಡ್ ಸದಸ್ಯರಾದ ಶ್ರೀ ಅಮೀರ್‌ಜಾನ್ ಮತ್ತು ಜಾನಪ್ಪನವರೂ ಪಾಲ್ಗೊಂಡಿದ್ದರು.

ಅಧಿಕಾರಿಗಳು ಸಮಸ್ಯೆಯ ಪರಿಹಾರಕ್ಕಾಗಿ ಮುಂದಾಗದ್ದನ್ನು ಕಂಡು ರೈತರು ತಾಲ್ಲೂಕು ಮಟ್ಟದ ರೈತರ ಹೋರಾಟಕ್ಕೆ ಕರೆ ಕೊಟ್ಟರು. 16-11-80 ರಂದು ತಾಲ್ಲೂಕಿನ ರೈತ ಪ್ರತಿನಿಧಿಗಳ ಸಭೆ ನಡೆದು ತಾಲ್ಲೂಕಿನ ರೈತ-ಕೂಲಿಗಾರರ ಸಮಸ್ಯೆ ಬಗ್ಗೆ ದೀರ್ಘವಾಗಿ ಚರ್ಚಿಸಿ 20-11-80 ರಂದು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲಾಯಿತು. ಒಂದು ವಾರದೊಳಗಾಗಿ ಬೇಡಿಕೆಗಳನ್ನು ಈಡೇರಿಸುವಂತೆ ಕೇಳಿಕೊಂಡರು.

ಬೇಡಿಕೆಗಳು ಈಡೇರುವ ಲಕ್ಷಣಗಳು ಕಂಡುಬರುವುದಿಲ್ಲವಾದ್ದರಿಂದ ವಿಸ್ತೃತ ಚಳುವಳಿಯ ಸಿದ್ಧತೆ ನಡೆಯುತ್ತಿದೆ.

ಪುತ್ತೂರು ತಾಲ್ಲೂಕು ರೈತ ಸಂಘದ ಸಭೆ

ತಾ. 19-11-80 ರಂದು ದ. ಕ. ಜಿಲ್ಲೆಯ ಪುತ್ತೂರಲ್ಲಿ ರೈತ ಸಂಘದ ತಾಲ್ಲೂಕು ಸಮಿತಿಯು ಕಾಂ. ತಂಬನ್ ಅವರ ಅಧ್ಯಕ್ಷತೆಯಲ್ಲಿ ಸೇರಿತು. ಆರಂಭದಲ್ಲಿ ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಕಾಂ ಲಕ್ಷ್ಮಣ ಗೌಡರು ಸ್ವಾಗತಿಸಿದರು.

ರೈತ ಕಾರ್ಮಿಕ ಮುಖಂಡರೂ, ರೈತ ಸಂಘದ ಉಪಾಧ್ಯಕ್ಷರೂ ಆದ ಕಾಂ. ಬಿ ರಾಮಕೃಷ್ಣನವರು ಪ್ರಸಕ್ತ ರಾಜಕೀಯ ಪರಿಸ್ಥಿತಿಯ ವರದಿಯ ನೀಡಿದರು. ರೈತ-ಕಾರ್ಮಿಕರ ಆಂದೋಲನವನ್ನು ಪುತ್ತೂರು ತಾಲೂಕಿನಲ್ಲೂ ಸಂಘಟಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಕಾಂ. ತಂಬನ್ ಅವರು ಮಾತನಾಡುತ್ತಾ "ಕಾಂಗ್ರೆಸ್ ಸರಕಾರ ಹೆಜ್ಜೆ ಹೆಜ್ಜೆಗೂ ಜನವಿರೋಧಿ ನೀತಿಯನ್ನು ಅನುಸರಿಸುತ್ತಿರುವುದು ಸ್ಪಷ್ಟವಾಗಿದೆ ಬಂಡವಾಳಶಾಹಿಗಳ ಹಿತಕ್ಕೆ ಧಕ್ಕೆ ಬರುವ ಯಾವುದೇ ಕಾನೂನುಗಳನ್ನು ಶ್ರೀಮತಿ ಇಂದಿರಾ ಗಾಂಧಿ ಸರಕಾರ ತರಲು ಇಚ್ಛಿಸುವುದಿಲ್ಲ" ಎಂದರು ಸರಕಾರದ ಜನವಿರೋಧಿ ಧೋರಣೆಗಳ ವಿರುದ್ಧ ಜನಸಾಮಾನ್ಯರು ಸಂಘಟಿತರಾಗಿ ಹೋರಾಟ ಮಾಡಲು ಕರೆಯಿತ್ತರು.

ಕೊನೆಗೆ ಸಭೆಯು ಈ ಕೆಳಗಿನ ನಿರ್ಣಯಗಳನ್ನು ಅಂಗೀಕರಿಸಿತು. ಡಿಸೆಂಬರ್ ತಿಂಗಳಲ್ಲಿ ದ. ಕ. ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ನಡೆಯಲಿರುವ ಮತಪ್ರದರ್ಶನ ಮತ್ತು ಮನವಿ ಅರ್ಪಿಸುವ ಚಳುವಳಿಯನ್ನು ಯಶಸ್ವಿಗೊಳಿಸಲು ಹಳ್ಳಿ ಹಳ್ಳಿಗಳಲ್ಲಿ ಸಭೆ ಜರಗಿಸಿ ಜನಜಾಗೃತಿಗೊಳಿಸಬೇಕು. ಕೇರಳದ ಮುಖ್ಯಮಂತ್ರಿ ಕಾಂ. ಇ.ಕೆ. ನಯನಾರ್ ಅವರ ಮೇಲೆ ದೆಹಲಿಯಲ್ಲಿ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರು ನಡೆಸಿದ ಘೆರಾವೋವನ್ನು ತೀವ್ರವಾಗಿ ಖಂಡಿಸಲಾಯಿತು. ಜನವರಿ 15ರಿಂದ 31ರ ತನಕ ನಡೆಯಲಿರುವ ದ. ಕ ಜಿಲ್ಲಾ ಸಮುದಾಯ ಸಾಂಸ್ಕೃತಿಕ ಜಾಥಾವನ್ನು ಯಶಸ್ವಿಗೊಳಿಸಲು ರೈತಸಂಘವು ಶ್ರಮಿಸಬೇಕೆಂದು ತೀರ್ಮಾನಿಸಲಾಯಿತು. ಕೊನೆಗೆ ಕಾರ್ಯದರ್ಶಿಯವರು ಧನ್ಯವಾದಗಳನ್ನಿತ್ತರು.

ರಾಷ್ಟ್ರಪತಿಗೆ ಆರು ವಿರೋಧ ಪಕ್ಷಗಳ ಮನವಿ

ಸಂಸತ್ತಿನ ಚಳಿಗಾಲದ ಅಧಿವೇಶನ ಪ್ರಾರಂಭವಾದ ನವೆಂಬರ್ 17ರಂದು ಆರು ವಿರೋಧ ಪಕ್ಷಗಳ ಮುಖಂಡರು ರಾಷ್ಟ್ರಪತಿ ಅವರ ಬಳಿಗೆ ನಿಯೋಗವೊಂದನ್ನು ಕೊಂಡೊಯ್ದು ಹದಗೆಡುತ್ತಿರುವ ದೇಶದ ಪರಿಸ್ಥಿತಿಯನ್ನು ಸುಧಾರಿಸುವಂತೆ ಒತ್ತಾಯಿಸಿ ಮನವಿಯೊಂದನ್ನು ಅರ್ಪಿಸಿದರು. ಲೋಕದಳದ ಚರಣ್ ಸಿಂಗ್, ಚಂದ್ರಜಿತ್ ಯಾದವ್, ದೇವಿಲಾಲ್ ಮತ್ತು ಎನ್.ಪಿ. ಶಾಹಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಮರ್ ಮುಖರ್ಜಿ ಮತ್ತು ಹರಿಕಿಶನ್ ಸಿಂಗ್ ಸುರ್ಜಿತ್, ಕಾಂಗ್ರೆಸ್(ಯು) ಪಕ್ಷದ ವೈ.ಬಿ. ಚವಾಣ್, ಕಿಶೋರ್ ದೇವ್ ಮತ್ತು ಭೋಲಾ ಪಾಸ್ವಾನ್ ಶಾಸ್ತ್ರಿ, ಸಿ.ಪಿ.ಐ.ನ ಇಂದ್ರಜಿತ್ ಗುಪ್ತಾ ಮತ್ತು ಭೂಪೇಶ ಗುಪ್ತಾ, ಆರೆಸ್ಪಿಯ ತ್ರಿದಿಬ್ ಚೌಧುರಿ ಮತ್ತು ಫಾರ್ವರ್ಡ್ ಬ್ಲಾಕಿನ ಚಿತ್ತಬಸು ಅವರನ್ನೊಳಗೊಂಡ ಈ ನಿಯೋಗವು ಜನರ ಸಂಕಷ್ಟಗಳ ಪರಿಹಾರಕ್ಕಾಗಿ ಸರಕಾರವು ಸೂಕ್ತ ಹಾಗೂ ಪರಿಣಾಮಕಾರಿ ಉಪಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿತು. ರಾಷ್ಟ್ರಪತಿಗೆ ಒಪ್ಪಿಸಲಾದ ಮನವಿಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿವೆ.

ಬೆಲೆಯೇರಿಕೆ :

ಜೀವನಾವಶ್ಯಕ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ಸಕ್ಕರೆಯ ಬೆಲೆ ಕೆ.ಜಿ.ಗೆ ರೂ.15ರಷ್ಟಾಗಿದೆ. ಸರಕಾರವೇ ಲೆವಿ ಸಕ್ಕರೆಯ ಬೆಲೆಯನ್ನು ಕೆ.ಜಿ.ಗೆ 65ಪೈಸೆಯಷ್ಟು ಹೆಚ್ಚಿಸಿದೆ. ಸೀಮೆ ಎಣ್ಣೆಯ ಬೆಲೆ ಲೀಟರ್‌ಗೆ ನಾಲ್ಕು ರೂಪಾಯಿ ಆಗಿದ್ದರೆ ಕಾಳಸಂತೆಯಲ್ಲಿ ಹೊರತು ಬೇರೆಲ್ಲೂ ಸಿಗಲಾರದ ಸಿಮೆಂಟಿನ ಬೆಲೆ ಚೀಲವೊಂದಕ್ಕೆ ರೂ.80ನ್ನು ಮೀರುತ್ತಿದೆ. ಕಳೆದ ಹತ್ತು ತಿಂಗಳ ಬೆಲೆಯೇರಿಕೆಯ ಪ್ರಮಾಣ ಶೇ.20ಕ್ಕೂ ಹೆಚ್ಚಿದೆ. ಇದು ಕೆಳಗಿಳಿಯುವ ಸೂಚನೆಯೇನೂ ಕಾಣಿಸುತ್ತಿಲ್ಲ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಲು ಸರಕಾರವು ಬದ್ಧವಾಗಿದ್ದರೂ ಇದನ್ನು ಕೃತಿಗಿಳಿಸಲಾಗಿಲ್ಲ. ಸರಕಾರ ಆಗತ್ಯ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಪೂರೈಕೆ ಮಾಡದಿರುವ ಕಾರಣ ಹಲವು ರಾಜ್ಯಗಳಲ್ಲಿ ಈಗಿರುವ ಸಾರ್ವಜನಿಕ ವಿತರಣಾ ವ್ಯವಸ್ಥೆಯೂ ಕುಸಿಯುತ್ತಿದೆ. ಈ ವ್ಯವಸ್ಥೆ ಸಂಪೂರ್ಣ ಕುಸಿಯದಿರಬೇಕಾದರೆ ಸರಕಾರವು ಅವಶ್ಯಕ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನಿರಿಸಿಕೊಂಡು ಅದನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಗಳಿಗೆ ಪೂರೈಕೆ ಮಾಡಬೇಕಾದುದು ಅಗತ್ಯ.

ರೈತರ ಉತ್ಪನ್ನಗಳಿಗೆ ಯೋಗ್ಯ ಬೆಲೆ :

ಇತರ ಜನರಂತೆ ರೈತರೂ ಬೆಲೆಯೇರಿಕೆಯಿಂದಾಗಿ ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ಕೃಷಿಗೆ ಬೇಕಾಗಿರುವ ಎಲ್ಲ ಸಲಕರಣೆಗಳ ಬೆಲೆ ಹೆಚ್ಚಿರವಾಗಲೂ ರೈತರ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗದಾಗಿದೆ. ಭತ್ತ ಕ್ವಿಂಟಾಲಿಗೆ ರೂ.125/-, ಕಬ್ಬು ಕ್ವಿಂಟಾಲಿಗೆ ರೂ.25/-ರಿಂದ30/-, ಸೆಣಬು ಕ್ವಿಂಟಾಲಿಗೆ ರೂ.300/- ಮತ್ತು ಹತ್ತಿ ಕ್ವಿಂಟಾಲಿಗೆ ರೂ 550/- ಸಿಗಬೇಕೆನ್ನುವುದು ನ್ಯಾಯುವಾದ ಬೇಡಿಕೆಯಾಗಿದ್ದರೂ ರೈತರಿಗೆ ಇದು ದೊರಕುತ್ತಿಲ್ಲ. ರೈತರ ನ್ಯಾಯಬದ್ಧ ಹೋರಾಟವನ್ನು ಕ್ರೂರವಾಗಿ ಹತ್ತಿಕ್ಕಲಾಗಿದೆ. ಬೆಲೆಯೇರಿಕೆಯಿಂದಾಗಿ ತ್ರಸ್ತರಾಗಿರುವ ಕಾರ್ಮಿಕರು, ಮಧ್ಯಮ ವರ್ಗದ ನೌಕರರು ಹೋರಾಟಕ್ಕಿಳಿದಿರುವಂತೆಯೇ ರೈತರೂ ತಮ್ಮ ಉತ್ಪನ್ನಗಳಿಗಾಗಿ ಯೋಗ್ಯ ಬೆಲೆಕೇಳಿ ಚಳುವಳಿ ನಡೆಸಬೇಕಾದುದು ಅನಿವಾರ್ಯವಾಗಿ ಪರಿಣಮಿಸಿದೆ. ಆರ್ಥಿಕ ಮತ್ತು ಇತರ ಸಂಬಂಧಪಟ್ಟ ಧೋರಣೆಗಳನ್ನು ಸಮಗ್ರವಾಗಿ ಬದಲಾಯಿಸದೆ ಬೆಲೆಯೇರಿಕೆಯನ್ನು ತಡೆಗಟ್ಟಲು ಸಾಧ್ಯವಿಲ್ಲ. ಬೆಲೆಯೇರಿಕೆಯ ಪ್ರಶ್ನೆಯಲ್ಲಿ ಬೇರೆಬೇರೆ ಜನವಿಭಾಗವನ್ನು ಒಬ್ಬೊಬ್ಬರ ಮೇಲೆ ಎತ್ತಿಕಟ್ಟುವುದರಿಂದ ಏನೂ ಪ್ರಯೋಜನವಾಗಲಾರದು.

ಕೋಮುವಾರು ಘರ್ಷಣೆ :

ಕಳೆದ ಹಲವು ತಿಂಗಳಿಂದ ದೇಶದ ಸ್ವಾಸ್ಥ್ಯ ಕೆಡಿಸುತ್ತಿರುವ ಕೋಮುವಾರು ಘರ್ಷಣೆಗಳ ವಿಷಯದಲ್ಲೂ ಮಂತ್ರಿಗಳೂ, ಉನ್ನತ ಅಧಿಕಾರಿಗಳೂ ತಮ್ಮ ಆಶ್ವಾಸನೆಗಳನ್ನು ಉಳಿಸಿಕೊಳ್ಳಲು ವಿಫಲರಾಗಿದ್ದಾರೆ. ಹಲವು ವೇಳೆ ಮತೀಯ ಗಲಭೆಗಳಲ್ಲಿ ಪೋಲೀಸ್ ಮತ್ತು ಆಡಳಿತ ಯಂತ್ರವೂ ಪಕ್ಷ ವಹಿಸಿ ಕೋಮು ವಾರು ಉದ್ರೇಕವನ್ನು ತೀವ್ರಗೊಳಿಸಿದ ನಿದರ್ಶನಗಳೂ ಇವೆ. ಎಲ್ಲ ಪ್ರಕಾರವಾದ ಕೋಮುವಾದಿ ಭಾವನೆಗಳನ್ನು ತಡೆಗಟ್ಟಲೂ ಮುಸ್ಲಿಂ ಅಲ್ಪಸಂಖ್ಯಾತರು ಮತ್ತು ಹರಿಜನರಿಗೆ ರಕ್ಷಣೆ ಒದಗಿಸಲೂ ಸರಕಾರವು ತೀವ್ರ ಕ್ರಮ ಕೈಗೊಳ್ಳಬೇಕು. ರಾಷ್ಟ್ರೀಯ ಭಾವೈಕ್ಯ ಕೌನ್ಸಿಲನ್ನು ಪುನರುಜ್ಜೀವನಗೊಳಿಸುವ ಮೂಲಕ ಕೋಮುವಾರು ಘರ್ಷಣೆಗಳನ್ನೂ, ಹರಿಜನರು ಮತ್ತು ದುರ್ಬಲ ವರ್ಗಗಳ ಮೇಲಿನ ಆಕ್ರಮಣವನ್ನೂ, ಅಸ್ಸಾಂ ಚಳುವಳಿ ಮತ್ತು ಈಶಾನ್ಯ ಭಾರತದ ಹದಗೆಡುತ್ತಿರುವ ಪರಿಸ್ಥಿತಿಯನ್ನು ಎದುರಿಸಲು ಪ್ರಯತ್ನಿಸಲಾಗಿದೆ. ಆದರೆ ಇದರಿಂದ ಬಯಸಿದ ಪರಿಣಾಮವುಂಟಾದಂತೆ ಕಾಣುತ್ತಿಲ್ಲ. ರಾಜಕೀಯ ಮತ್ತು ಆಡಳಿತೆಯ ಕ್ರಮಗಳೆರಡನ್ನೂ ಕೌಶಲ್ಯದಿಂದ ಬಳಸಿಕೊಳ್ಳುವ ಮೂಲಕ ಮಾತ್ರವೇ ವಿಚ್ಛಿದ್ರಕಾರಿ ಶಕ್ತಿಗಳ ಚಟುವಟಿಕೆಗಳನ್ನು ತಡೆಗಟ್ಟಬಹುದು. ಇದರಲ್ಲಿ ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರಮುಖ ಪಾತ್ರವಹಿಸಬೇಕಾದ ಕಾರಣ ಅಂತಹ ಶಕ್ತಿಗಳನ್ನು ಕ್ರೋಢೀಕರಿಸುವುದೂ ಅಗತ್ಯ. ಆದರೆ ಸರಕಾರ ಇದಕ್ಕೆ ತೀರಾ ವಿರುದ್ಧ ಗತಿಯಲ್ಲಿ ಸಾಗುತ್ತಿರುವುದು ವಿಷಾದನೀಯ.

ದಮನಕಾರಿ ಕ್ರಮಗಳು :

ರಾಷ್ಟ್ರವಿರೋಧಿ ಮತ್ತು ವಿಚ್ಛಿದ್ರಕಾರೀ ಶಕ್ತಿಗಳನ್ನು ಎದುರಿಸುವ ಕುಂಟು ನೆಪದಲ್ಲಿ ಜಾರಿಗೆ ತರಲಾದ ರಾಷ್ಟ್ರೀಯ ಸುರಕ್ಷಿತಾ ಅಧ್ಯಾದೇಶ ಮತ್ತು ಇತರ ದಮನಕಾರಿ ಕ್ರಮಗಳನ್ನು ನಾವು ಸಂಪೂರ್ಣ ವಿರೋಧಿಸುತ್ತೇವೆ. ಇಂತಹ ಕ್ರಮಗಳನ್ನು ದುಷ್ಟಶಕ್ತಿಗಳ ವಿರುದ್ಧ ಬಳಸದೆ ಕೇವಲ ಪ್ರಜಾಸತ್ತಾತ್ಮಕ ಮತ್ತು ಸಾಮುದಾಯಿಕ ಆಂದೋಲನಗಳನ್ನು ಸದೆಬಡಿಯಲು ಉಪಯೋಗಿಸಲಾಗುತ್ತಿದೆಯೆನ್ನುವುದನ್ನು ನಾವು ಕಳೆದ ಹಲವು ವರ್ಷಗಳ ಅನುಭವದಿಂದ ಕಂಡುಕೊಂಡಿದ್ದೇವೆ. ರಾಷ್ಟ್ರೀಯ ಸುರಕ್ಷಿತಾ ಅಧ್ಯಾದೇಶ ಮತ್ತು ಅಂತಹ ಎಲ್ಲ ದಮನಕಾರಿ ಕ್ರಮಗಳನ್ನು ಕೂಡಲೇ ರದ್ದುಪಡಿಸಿ ಜನರ ಪ್ರಜಾಸತ್ತಾತ್ಮಕ ಮತ್ತು ನಾಗರಿಕ ಹಕ್ಕುಗಳನ್ನ ಮರಳಿ ಸ್ಥಾಪಿಸಿ ಅವುಗಳನ್ನು ವಿಸ್ತರಿಸುವಂತೆ ಮಾಡಬೇಕೆಂದೂ ನಾವು ಒತ್ತಾಯಿಸುತ್ತೇವೆ. ನ್ಯಾಯಾಧೀಶರ ನೇಮಕ ಮತ್ತು ವರ್ಗಾವರ್ಗಿಯ ವಿಷಯದಲ್ಲಿ ವರಿಷ್ಠನ್ಯಾಯಾಧೀಶರ ಸಾಂವಿಧಾನಿಕ ಜವಾಬ್ದಾರಿಗಳಲ್ಲೂ ಸರಕಾರ ಹಸ್ತಕ್ಷೇಪ ನಡೆಸಲೆತ್ನಿಸುತ್ತಿರುವುದನ್ನೂ ನಾವು ಖಂಡಿಸುತ್ತೇವೆ.

ರಾಜ್ಯಗಳ ರಾಜ್ಯಪಾಲರುಗಳನ್ನು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷಕ್ಕೆ ವಿಧೇಯರಾಗಿರುವಂತೆ ಅವರ ಮೇಲೆ ಒತ್ತಡ ಹೇರಲಾಗುತ್ತಿದೆ. ಹಲವರು ರಾಜ್ಯಪಾಲರು ಅವರ ಅವಧಿಗೆ ಮೊದಲೇ ರಾಜೀನಮೆ ನೀಡುವಂತೆಯೂ ಅವರನ್ನು ಒತ್ತಾಯಿಸಲಾಗುತ್ತಿದೆ. ಒಬ್ಬರನ್ನಂತೂ ಬಲವಂತವಾಗಿ ಕಿತ್ತೊಗೆಯಲಾಗಿದೆ. ಇಂತಹ ಸಂದರ್ಭಗಳಲ್ಲಿ ಆಯಾ ರಾಜ್ಯಗಳ ಮುಖ್ಯಮಂತ್ರಿಗಳಿಗೂ ಉದ್ದೇಶಪೂರ್ವಕವಾಗಿ ಇದರ ಬಗ್ಗೆ ತಿಳುವಳಿಕೆ ನೀಡಲಾಗಿಲ್ಲ. ಇವೆಲ್ಲವೂ ದೇಶದ ಫೆಡರಲ್ ಸ್ವರೂಪಕ್ಕೂ ಕೇಂದ್ರ-ರಾಜ್ಯಗಳ ನಡುವಣ ಸಂಬಂಧಕ್ಕೂ ಹಾನಿಯುಂಟುಮಾಡುತ್ತಿವೆ.

ಪ್ರಜಾಸತ್ತೆಯ ವಿನಾಶ :

ಈಗಿನ ಸಂಸತ್ತು ಮತ್ತು ಸಚಿವ ಸಂಪುಟದ ಪದ್ಧತಿಯನ್ನು ತೆಗೆದು ಹಾಕಿ ಅಧ್ಯಕ್ಷೀಯ ಪದ್ಧತಿಯ ಆಳ್ವಿಕೆಯನ್ನು ದೇಶದ ಮೇಲೆ ಹೇರುವ ಪ್ರಯತ್ನಗಳು ನಮಗೆ ತೀವ್ರ ಆಘಾತವುಂಟುಮಾಡಿವೆ. ವಿಷಮಪರಿಸ್ಥಿತಿಯ ಕರಾಳ ದಿನಗಳಲ್ಲಿ ಇಂತಹದೇ ಒಂದು ಪ್ರಯತ್ನ ನಡೆದಿರುವುದು ನಮಗೆ ಗೊತ್ತು. ಇಂತಹ ಪ್ರಯತ್ನಗಳ ಬಗ್ಗೆ ಸ್ಥಾಪಿತಹಿತಾಸಕ್ತಿಗಳೂ ಆಡಳಿತ ಪಕ್ಷಕ್ಕೆ ಸೇರಿದ ಮುಖ್ಯಮಂತ್ರಿಗಳೂ, ಮುಖಂಡರೂ ಬಹಿರಂಗವಾಗಿ ವಕಾಲತ್ತು ನಡೆಸುತ್ತಿದ್ದಾರೆ. ಅಧ್ಯಕ್ಷೀಯ ಆಡಳಿತ ಪದ್ಧತಿಯನ್ನು ಜಾರಿಗೆ ತರುವ ವಿಚಾರವು ಪ್ರಜಾಸತ್ತೆಗೆ ವಿನಾಶಕಾರಿಯಾಗುವುದು ಮಾತ್ರವಲ್ಲ ಅದು ರಾಷ್ಟ್ರದ ಒಗ್ಗಟ್ಟಿಗೂ ಹಾನಿಕರವಾಗಲಿದೆ. ಇಂತಹ ಯಾವುದೇ ಇರಾದೆಯೂ ಸರಕಾರಕ್ಕೆ ಇಲ್ಲವೆನ್ನುವ ಕುರಿತು ಅಧಿಕೃತ ಮತ್ತು ಸ್ಪಷ್ಟ ಆಶ್ವಾಸನೆಯೊಂದನ್ನು ಈ ಕೂಡಲೇ ನೀಡಬೇಕೆಂದು ನಾವು ಒತ್ತಾಯಿಸುತ್ತೇವೆ.

○

ಹೊಸಪೇಟೆ ಎಸ್.ಎಫ್.ಐ.ನ ಆಶ್ರಯದಲ್ಲಿ ಉಪನ್ಯಾಸ

ದಿನಾಂಕ 22-11-80 ರಂದು ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ನಡೆಸಿದ "ಭಾರತದಲ್ಲಿ ನಿರುದ್ಯೋಗ ಮತ್ತು ಅದರ ಪರಿಹಾರ" ಎಂಬ ಉಪನ್ಯಾಸ ಕಾರ್ಯಕ್ರಮದಲ್ಲಿ ವಿಜಯನಗರ ಕಾಲೇಜಿನ ಅರ್ಥಶಾಸ್ತ್ರ ಅಧ್ಯಾಪಕರಾದ ಶ್ರೀ ಎ. ಮಲ್ಲಪ್ಪ ಇವರು "ನಿರುದ್ಯೋಗ ನಿವಾರಣೆಗೆ ಸಮಾಜವಾದಿ ರಾಷ್ಟ್ರಗಳಲ್ಲಿರುವಂತೆ ಸಂಪತ್ತಿನ ಸಮಾನ ಹಂಚಿಕೆ, ಗ್ರಾಮಾಂತರ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆಗಳ ಅಭಿವೃದ್ಧಿ ಯೋಜನೆಗಳನ್ನು ಸರಿಯಾಗಿ ಅನುಷ್ಠಾನಕ್ಕೆ ತರುವುದು, ಮೂಢನಂಬಿಕೆಗಳ ನಿವಾರಣೆ, ಸಂಪನ್ಮೂಲಗಳ ಸರಿಯಾದ ಉಪಯೋಗ ಜನಸಂಖ್ಯೆ ನಿಯಂತ್ರಣ ಮುಂತಾದ ಕಾರ್ಯಕ್ರಮಗಳ ಮೂಲಕ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವೆಂದು" ಪರಿಣಾಮಕಾರಿಯಾಗಿ ವಿಶ್ಲೇಷಿಸಿದರು.

ಕರ್ನಾಟಕ ರಾಜ್ಯ ಭಾರತ ವಿದ್ಯಾರ್ಥಿ ಫೆಡರೇಷನ್ ಅಧ್ಯಕ್ಷರಾದ ಕಾಂ. ಇಕ್ಬಾಲ್ ಹುಸೇನ್ ಇವರು ಮಾತನಾಡುತ್ತ "ದುಡಿಯುವ ಜನತೆ ಹಾಗೂ ನಿರುದ್ಯೋಗ ಯುವಜನಾಂಗ ಕೈಕೊಳ್ಳುವ ಕ್ರಾಂತಿಕಾರಕ ಮಾರ್ಗದಿಂದ ಬರುವ ವರ್ಗರಹಿತ ಸಮಾಜದಲ್ಲಿ ಮಾತ್ರ ನಿರುದ್ಯೋಗ ಸಮಸ್ಯೆಯು ಸಂಪೂರ್ಣವಾಗಿ ನಿವಾರಣೆಯಾಗಲಿಕ್ಕೆ ಸಾಧ್ಯವೆಂದು" ಹೇಳಿದರು. "ನಮ್ಮ ದೇಶಕ್ಕಿಂತ ಹೆಚ್ಚಿನ ಜನಸಂಖ್ಯೆಯುಳ್ಳ ಚೈನಾ ದೇಶವು ನಮಗೆ ಸ್ವತಂತ್ರ್ಯ ಬಂದು ಎರಡು ವರ್ಷಗಳ ನಂತರ ಆ ದೇಶಕ್ಕೆ ಸ್ವತಂತ್ರ್ಯ ಬಂದರೂ ಕೂಡ ನಿರುದ್ಯೋಗ, ಹಣದುಬ್ಬರ, ಬಡತನ, ಹಸಿವು ಮುಂತಾದ ಸಮಾಜದ ನಿವಾರಣೆಯಾಗಿರುವುದಕ್ಕೆ ಅಲ್ಲಿನ ದುಡಿಯುವ ಜನತೆಯ ಹೋರಾಟದಿಂದ ಬಂದ ಸಮಾಜವಾದಿ ವ್ಯವಸ್ಥೆಯೇ ಕಾರಣವೆಂದು ಹೇಳಿದರು. ಈ ದೇಶದಲ್ಲೂ ದುಡಿಯುವ ಜನರೇ ಮತ್ತು ನಿರುದ್ಯೋಗ ಯುವಜನಾಂಗ ತೀವ್ರವಾದ ಸಂಘಟನೆ ಕೈಗೊಂಡು ಕ್ರಾಂತಿಕಾರಕ ಹೋರಾಟದಿಂದ ಇಲ್ಲೂ ಸಹ ಸಮಾಜವಾದಿ ಆರ್ಥಿಕ ವ್ಯವಸ್ಥೆಯನ್ನು ತರುವುದರ ಮೂಲಕ ನಿರುದ್ಯೋಗ ನಿವಾರಣೆಯನ್ನು ಮಾಡಲು ಸಾಧ್ಯವೆಂದು" ತಿಳಿಸಿದರು. "ಇಂತಹ ಕಾರ್ಯಕ್ರಮಗಳನ್ನು ಪ. ಬಂಗಾಳ, ಕೇರಳದಂತಹ ರಾಜ್ಯಗಳಲ್ಲಿನ ಭಾರತ ವಿದ್ಯಾರ್ಥಿ ಫೆಡರೇಷನ್ ತನ್ನ ಕಾರ್ಯಕ್ರಮಗಳಲ್ಲಿ ಉದ್ಯೋಗಕೊಡಿ ಇಲ್ಲವೆ ನಿರುದ್ಯೋಗ ಭತ್ಯ ಕೊಡಿ ಎಂಬ ಘೋಷಣೆಯನ್ನು ಈ ದೇಶದಲ್ಲಿ ಮೊಟ್ಟ ಮೊದಲು ಹೋರಾಡುವುದರ ಮೂಲಕ ಪ. ಬಂಗಾಳ, ಕೇರಳ ರಾಜ್ಯಗಳು ನಿರುದ್ಯೋಗ ಭತ್ಯವನ್ನು ಕೊಡಲು, ಇದೇ ಪದ್ಧತಿಯನ್ನು ಇನ್ನೂ ಕೆಲವು ರಾಜ್ಯಗಳು ಜಾರಿಗೆ ತರುವುದಕ್ಕೆ ಭಾರತ ವಿದ್ಯಾರ್ಥಿ ಫೆಡರೇಷನ್ (Students Federation of India) ಮುಖ್ಯ ಕಾರಣವೆಂದು" ತಿಳಿಸಿದರು.

ಸಭೆಯ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಎಸ್. ಎ ರಾಘವುಲು ಇವರು ಅರಸು ಸರಕಾರ ಇದ್ದಾಗ ಹಾವನೂರು ಆಯೋಗದ ಮೂಲಕ ಅನೇಕ ವಿಶೇಷವಾದ ಕಾರ್ಯಕ್ರಮಗಳಾದ ನಿರುದ್ಯೋಗ ನಿವಾರಣೆಗೆ ಶ್ರಮಿಸಲು ಹಾಗೂ ನಿರುದ್ಯೋಗಿ ಪದವೀಧರರಿಗೆ ಸ್ಟೈಫಂಡ್ ಕೊಡುವ ವ್ಯವಸ್ಥೆಯಿಂದ ಇಂದು ಸುಮಾರು 15 ಸಾವಿರ ನಿರುದ್ಯೋಗಿಗಳು ಇದರ ಲಾಭ ಪಡೆಯುತ್ತಿದ್ದಾರೆಂದು ಆದರೆ ಈಗಿನ ಗುಂಡೂರಾವ್ ಸರಕಾರ ನಿರುದ್ಯೋಗ ಪರಿಹಾರಕ್ಕಾಗಿ ಯಾವುದೇ ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಳ್ಳದೇ ಇರುವುದು ಅವರ ಸರಕಾರದ ವೈಫಲ್ಯವನ್ನು ತೋರಿಸಿಕೊಡುವುದೆಂದು ತಿಳಿಸಿದರು.

ಈ ಸಭೆಗೆ ರೈತ ಮುಖಂಡರು, ಕಾರ್ಮಿಕ ಮುಖಂಡರು ವಿದ್ಯಾರ್ಥಿಗಳು, ಬುದ್ಧಿಜೀವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾಂ. ಹುಸೇನ್‌ರವರು ಪ್ರಾರಂಭಕ್ಕೆ ಕ್ರಾಂತಿಗೀತೆಯನ್ನು ಹಾಡಿದರು. ಕಾಂ ಅಶೋಕ್‌ಕುಮಾರ್ ಸ್ವಾಗತ ಭಾಷಣ ಮಾಡಿದರು. ಕಾಂ. ಶಾಂತಕುಮಾರಿ ಇವರು ವಂದನಾರ್ಪಣೆ ಮಾಡಿದರು.

ವರದಿ : ಜಂಬಯ್ಯ ನಾಯಕ

●

ದ. ಕ. ಜಿಲ್ಲೆಯ ಬೀಡಿ ಕಾರ್ಮಿಕರ ಸಂಘಟನೆ ಮತ್ತು ಹೋರಾಟ

ದ. ಕ. ಜಿಲ್ಲೆಯ ಬೀಡಿಕಾರ್ಮಿಕರಿಗೆ ಜಿಲ್ಲೆಯ ಟ್ರೇಡ್‌ಯೂನಿಯನ್ ಚರಿತ್ರೆಯಲ್ಲಿ ಭವ್ಯವಾದ ಪರಂಪರೆಯಿದೆ. ಹಂಚು, ನೇಯ್ಗೆ ಮತ್ತು ಪ್ರಿಂಟಿಂಗ್ ಪ್ರೆಸ್‌ಗಳ ಕಾರ್ಮಿಕರ ಸಂಘಟನೆಗಳು ಈ ಜಿಲ್ಲೆಯ ಮೊದಲ ಟ್ರೇಡ್‌ಯೂನಿಯನ್ ಸಂಘಟನೆಗಳಾಗಿವೆ. ಬೀಡಿಕಾರ್ಮಿಕರು ತಾವು ಮಾತ್ರ ಸಂಘಟನೆಯಾಗಿರುವುದು ಮಾತ್ರವಲ್ಲ, ಜಿಲ್ಲೆಯ ಗೇರುಬೀಜ, ಕಾಫಿ-ಏಲಕ್ಕಿ-ಅಡಿಕೆ-ಇತ್ಯಾದಿ ಕೆಲಸಗಾರರನ್ನು ಸಂಘಟಿಸಲು ಸ್ವಯಂಸೇವಕರಾಗಿ, ಕಾರ್ಯಕರ್ತರಾಗಿ ದುಡಿದವರಾಗಿದ್ದಾರೆ.

ಆರಂಭದಲ್ಲಿ ಜಿಲ್ಲೆಯ ಬೀಡಿ ಕೆಲಸಗಾರರು ಸಂಘಟನೆಯಾಗಿರುವುದೇ ಕೆಲಸ ಸ್ಥಿರತೆಗಾಗಿ ಮತ್ತು ಕೆಲಸ ಮಾಡಲು ಬೇಕಾದ ಅನುಕೂಲತೆಗಾಗಿ ಆಗಿತ್ತು. ಹಿಂದೆ ಪಿ.ವಿ.ಎಸ್. ಗ್ರೇಟ್ ದರ್ಬಾರ್, ಸುವಾಸಿನಿ, ಗಣೇಶ, ಪ್ರಕಾಶ್ ಮತ್ತು ಭಾರತ್ ಮೊದಲಾದ ಹಿರಿಯ ಬೀಡಿ ಮಾಲಕರುಗಳಿಗೆ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳಿದ್ದುವು. ಈ ಕಾರ್ಖಾನೆಗಳಲ್ಲಿ 300 ರಿಂದ 500 ರ ವರೆಗೂ ಕೆಲಸಗಾರರು ಬೀಡಿ ಕಟ್ಟುತ್ತಿದ್ದರು. ಬೀಡಿಮಾಲಕರು ಕೆಲಸಗಾರರಿಗೆ ವಿಪರೀತ ತೊಂದರೆ ಕೊಡುತ್ತಿದ್ದರು. ಕೆಲಸ ಮಾಡಲು ಬೇಕಾದ ಅನುಕೂಲತೆಗಳನ್ನು ಕೂಡಾ ಇವರು ಒದಗಿಸುತ್ತಿರಲಿಲ್ಲ, ಬೀಡಿ ಮಾಲಕರುಗಳು ಕೆಲಸಗಾರರು ಸಂಘಕ್ಕೆ ಸೇರುವುದಕ್ಕೆ ತೀರಾ ವಿರೋಧವಾಗಿದ್ದರು. ಹೊಸದಾಗಿ ಕೆಲಸಕ್ಕೆ ಸೇರುವವರಿಂದ ಸಂಘಕ್ಕೆ ಸೇರುವುದಿಲ್ಲವೆಂದು ಬರೆಯಿಸಿ ತೆಗೆದುಕೊಳ್ಳುತ್ತಿದ್ದರು. ಬೀಡಿ ಕಟ್ಟಲು ಕುಳಿತುಕೊಳ್ಳಲಿಕ್ಕೂ ನಿರ್ಮಲವಾದ ಸ್ಥಳವಿರಲಿಲ್ಲ. ಕಾರ್ಖಾನೆಯೊಳಗೆ ನೀರಿನ ಸೌಕರ್ಯ, ಮೂತ್ರದೊಡ್ಡಿ ವ್ಯವಸ್ಥೆ ಯಾವುದೂ ಇರಲಿಲ್ಲ. ಇದು ಬೀಡಿ ಕೆಲಸಗಾರರ ಆಗಿನ ಪರಿಸ್ಥಿತಿಯಾಗಿತ್ತು.

ಸಂಘಟನೆ ಬಲಗೊಳ್ಳುತ್ತಾ ಹೋದ ಹಾಗೆ ಬೀಡಿ ಕಾರ್ಮಿಕರು ಬೋನಸ್ ಮತ್ತು ಕೂಲಿ ಏರಿಕೆಯ ಬೇಡಿಕೆಗಳನ್ನು ಮುಂದಿಟ್ಟು ಮುಷ್ಕರವನ್ನಾರಂಭಿಸಿದಾಗ, ಕೆಲವರು ಜಾತೀಯತೆಯ ಮತ್ತು ರಾಷ್ಟ್ರೀಯತೆಯ ಹೆಸರಿನಲ್ಲಿ ಪ್ರತಿಸಂಘಗಳನ್ನು ರಚಿಸಿ ಮುಷ್ಕರವನ್ನು ಮುರಿಯಲು ಪ್ರಯತ್ನಿಸಿದರು. ಬೀಡಿ ಮಾಲಕರು ಹಳ್ಳಿಗಳಲ್ಲಿ ಬೀಡಿ ತಯಾರಿಸಲು ಆರಂಭಿಸಿದರು. ಕೆಲಸಗಾರರ ಬೇಡಿಕೆಗಳನ್ನೊಪ್ಪದ ಮಾಲಕರ ಬೀಡಿಯನ್ನು ಬಹಿಷ್ಕರಿಸುವಂತೆ ಡಿಪೋಗಳ ಮುಂದೆ ಪಿಕೆಟಿಂಗ್ ನಡೆಯಿಸಲಾಯಿತು. ನೂರಾರು ಮಂದಿಯ ಬಂಧನ, ಹಲವಾರು ಕಡೆಗಳಲ್ಲಿ ಲಾಠಿ ಚಾರ್ಜ್, ಅನೇಕ ಮಂದಿಗೆ ಜೈಲು ಶಿಕ್ಷೆ ಅನುಭವ. ಬೀಡಿ ಕೆಲಸಗಾರರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿರುವ ಕೇಬಾವಟಕ್ಕೆ ಅನುಕೂಲವಿರುವ ಪ್ರದೇಶಗಳಲ್ಲಿ ರಾತ್ರಿ ವೇಳೆ ಮನೆ ನುಗ್ಗಿ ಪೋಲೀಸರು ದಬ್ಬಾಳಿಕೆ ನಡೆಸಿದರು. ಮನೆಯಲ್ಲಿದ್ದವರಿಗೆಲ್ಲಾ ಹೊಡೆದರು. ಹಾಗೂ ಉಗುರು ನೋಡಿ ನೋಡಿ ಹೊಡೆದರು. ಕೆಲವು ಬಾರಿ ಮುಷ್ಕರವನ್ನು ಹಿಂದೆ ತೆಗೆದುಕೊಂಡು ಹಾಗೂ ಕೆಲವು ಸಂದರ್ಭ ಮುಷ್ಕರ ನಡೆಸಿ ಯಶಸ್ವಿಯಾದದ್ದು ಇದೆ.

ಫ್ಯಾಕ್ಟರಿಗಳಲ್ಲಿ ಬೀಡಿ ಕಟ್ಟುತ್ತಿದ್ದ ಕಾರ್ಮಿಕರಿಗೆ ಬೇರೆ ಬೇರೆ ರೀತಿಯ ಆಶೆ-ಆಮಿಷಗಳನ್ನು ತೋರಿಸಿ. ಎಲೆ-ತಂಬಾಕು ಕೊಟ್ಟು ಮನೆಗಳಲ್ಲಿ ಬೀಡಿ ಕಟ್ಟಿ ತರುವಂತೆ ಪ್ರೇರೇಪಿಸಿದರು. ಅನೇಕ ಮಂದಿಗೆ ಕಂಟ್ರಾಕ್ಟು ಬ್ರಾಂಚು ಕೊಟ್ಟು ಹೊರ ಹಾಕಿದರು. ಬೀಡಿ ಮಾಲಕರುಗಳೇ ನೇರವಾಗಿ ನಡೆಸುತ್ತಿದ್ದ ಬ್ರಾಂಚುಗಳನ್ನು ಬ್ರಾಂಚು ಮೆನೇಜರರ ಹೆಸರಿನಲ್ಲಿ ಲೈಸೆನ್ಸ್ ಮಾಡಿಸಿ, ಕಂಟ್ರಾಕ್ಟು ಬ್ರಾಂಚುಗಳಾಗಿ ಪರಿವರ್ತಿಸಿದರು. ಬೀಡಿ ಕೈಗಾರಿಕೆ ಮನೆಮನೆಗೆ ಹರಡಿದ್ದರಿಂದ ಮಹಿಳೆಯರು ಬೀಡಿ ಕಟ್ಟಲು ಕಲಿಯತೊಡಗಿದರು. ಬೀಡಿ ಕಟ್ಟುವವರಲ್ಲಿ ಅವರ ಸಂಖ್ಯೆಯೇ ಹೆಚ್ಚಾಗತೊಡಗಿತು. ಪೇಟೆಗಳಿಂದ ದೂರದೂರದ ಹಳ್ಳಿಗಳಿಗೂ ಹರಡಿತು. ಫ್ಯಾಕ್ಟರಿಗಳು ಮಾಯವಾಗಿ, ಕಂಟ್ರಾಕ್ಟು ಪದ್ಧತಿ ಸಾರ್ವತ್ರಿಕವಾಯಿತು.

ಬೀಡಿ ಕಾರ್ಮಿಕರು ಕನಿಷ್ಟ ಮಜೂರಿ ನಿರ್ಣಯಿಸಬೇಕೆಂದು ಒತ್ತಾಯಿಸಿ, ಹಲವಾರು ಬಾರಿ ಹೋರಾಟ ಮಾಡಿದುದರ ಪರಿಣಾಮವಾಗಿ ಸರಕಾರ ಬೀಡಿ ಕೈಗಾರಿಕೆಗೆ ಕನಿಷ್ಟ ಕೂಲಿ ನಿರ್ಣಯಿಸಲು ಸಮಿತಿಯೊಂದನ್ನು ರಚಿಸಿ, ತನ್ಮೂಲಕ ನಿರ್ಣಯಿಸಿರುವ ಕನಿಷ್ಟ ಮಜೂರಿಯನ್ನು ಜಾರಿಗೆ ತರಬೇಕಾದರೆ ಬೀಡಿ ಕೆಲಸಗಾರರು ಕಂಟ್ರಾಕ್ಟುದಾರರುಗಳನ್ನು ಮುತ್ತಿಗೆ ಹಾಕಿದ ನಂತರವೇ ಬೀಡಿ ಕಂಟ್ರಾಕ್ಟುದಾರರುಗಳು ಕನಿಷ್ಟ ಮಜೂರಿಯನ್ನು ಜಾರಿಗೆ ತರಲು ನಿರ್ಬಂಧಿತರಾದರು.

1974 ಮೊದಲು ಬೀಡಿ ಕೆಲಸಗಾರರಿಗೆ ಕನಿಷ್ಟ ಕೂಲಿ ಅಲ್ಲದೆ ಬೇರೆ ಯಾವ ಅನುಕೂಲತೆಗಳೂ ಸಿಗುತ್ತಿರಲಿಲ್ಲ. ಈ ಪರಿಸ್ಥಿತಿ ಬದಲಾಗಿ ಇಂದು ಬೀಡಿ ಕೆಲಸಗಾರರಿಗೂ ಇತರ ಕೈಗಾರಿಕೆಗಳ ಕೆಲಸಗಾರರಿಗೆ ಸಿಗುತ್ತಿರುವ ಕೆಲವು ಅನುಕೂಲತೆಗಳು ಸಿಗುತ್ತಿವೆ. ಇದನ್ನು ಬೀಡಿ ಮಾಲಕರು ಕೈಯೆತ್ತಿ ಕೊಟ್ಟದ್ದೆಂತ ಬೀಡಿ ಕೆಲಸಗಾರರು ಖಂಡಿತವಾಗಿಯೂ ಹೇಳಲಾರರು. ಕಾರಣ, ಕಾನೂನು ಜಾರಿಗೆ ಬಾರದಂತೆ ತಡೆಯಲು ಸರ್ವರೀತಿಯಿಂದಲೂ ಪ್ರಯತ್ನಿಸಿರುವುದು ಮಾತ್ರವಲ್ಲ ಅದಕ್ಕಿದಿರಾಗಿ ಸುಪ್ರೀಂಕೋರ್ಟಿನವರೆಗೂ ಹೋರಾಡಿದವರು ಈ ಜಿಲ್ಲೆಯ ಹಾಗೆಯೇ ಈ ರಾಜ್ಯದ ಬೀಡಿ ಮಾಲಕರುಗಳು ಎಂಬುದು ಎಲ್ಲರಿಗೂ ಗೊತ್ತಿದೆ. ಇನ್ನು ಸರಕಾರವೇ ಈ ಅನುಕೂಲತೆಗಳನ್ನು ಬೀಡಿ ಕೆಲಸಗಾರರಿಗೆ ಒದಗಿಸಿ ಕೊಟ್ಟಿದೆ ಎಂದು ಯಾರಾದರೂ ಹೇಳಿದರೆ ಅದು ಕೂಡಾ ಸರಿಯಾಗದು, ಏಕೆಂದರೆ ಕಾನೂನನ್ನು ಪಾಸು ಮಾಡಿರುವ ಸರಕಾರ ಅದನ್ನು ಅನುಷ್ಠಾನಕ್ಕೆ ತರಲು ಯಾವ ಕ್ರಮವನ್ನೂ ವಹಿಸಿಲ್ಲ; ಹಾದಿರುವಾಗ ಒಂದು ರೀತಿಯಲ್ಲಿ ಮಾಲಕರ ಪರವಹಿಸಿದೆ ಅನ್ನುವುದು ಸ್ಪಷ್ಟ. ದೇಶದ ಅನೇಕ ರಾಜ್ಯಗಳಲ್ಲಿ ಈಗಲೂ ಕರ್ನಾಟಕಕ್ಕಿಂತಲೂ ಕಡಿಮೆ ಕೂಲಿ ಇದೆ. ದೇಶದ ಅನೇಕ ರಾಜ್ಯಗಳಲ್ಲಿ ಇನ್ನೂ ಕಾನೂನು ಜಾರಿಗೆ ಬಂದಿಲ್ಲ. ಕರ್ನಾಟಕ ರಾಜ್ಯದಲ್ಲೇ ನೋಡಿದರೂ ರಾಜ್ಯದ ಅನೇಕ ಕಡೆಗಳಲ್ಲಿ ಬೀಡಿ ಕೆಲಸಗಾರರಿಗೆ ಈಗಲೂ ಬೋನಸ್, ರಜಾ ಸಂಬಳ ಮತ್ತು ಹೆರಿಗೆ ಭತ್ತೆ ಸಿಗುತ್ತಿಲ್ಲ. ಬೀಡಿ ಕೆಲಸಗಾರರು ಬಲವಾಗಿ ಸಂಘಟಿತರಾಗಿರುವಲ್ಲೆಲ್ಲಾ ಕೆಲವು ಅನುಕೂಲತೆಗಳು ಸಿಗುತ್ತಿವೆಯಲ್ಲದೆ, ಕೆಲಸಗಾರರು ಇನ್ನೂ ಸಂಘಟಿತರಾಗದಿರುವಲ್ಲಿ ಏನೂ ಸಿಗುತ್ತಿಲ್ಲ.

ಆದುದರಿಂದ ಬೀಡಿ ಕಾರ್ಮಿಕರಿಗೆ ಕನಿಷ್ಟಕೂಲಿ, ಬೋನಸ್ ಹೆರಿಗೆ ಭತ್ತೆ, ಪ್ರೊವಿಡೆಂಟ್ ಫಂಡ್ ಇತ್ಯಾದಿ ಅನುಕೂಲತೆ ಸಿಗುತ್ತಿರುವುದಾದರೆ ಅದಕ್ಕೆ ಸಹಸ್ರಾರು ಸಂಘಟಿತ ಬೀಡಿ ಕೆಲಸಗಾರರು ಅನೇಕ ರೀತಿಯ ಕಷ್ಟ-ನಷ್ಟಗಳನ್ನು ಅನುಭವಿಸಿ ದೀರ್ಘಕಾಲದಿಂದ ಹೋರಾಟ ನಡೆಸಿದರಿಂದಾಗಿ ಸಿಗುತ್ತದೆ ಅಂತ ಹೇಳಬಹದು. ಇಂದು ಬೀಡಿ ಕೆಲಸಗಾರರಿಗೆ ಸಿಗುತ್ತಿರುವ ಸವಲತ್ತುಗಳು ಖಾಯಂ ಆಗಿ ಸಿಗುವಂತಾಗಬೇಕಾದರೆ ಮತ್ತು ಜಿಲ್ಲೆಯ ಎಲ್ಲಾ ಬೀಡಿ ಕಾರ್ಮಿಕರಿಗೂ ಸಿಗುವಂತಾಗಬೇಕಾದರೆ ಬೀಡಿ ಕೆಲಸಗಾರರು ತಮ್ಮ ಸಂಘಟನೆಯನ್ನು ಇನ್ನಷ್ಟು ಬಲಪಡಿಸಬೇಕಾಗಿದೆ ಮತ್ತದನ್ನು ವಿಸ್ತರಿಸಬೇಕಾಗಿದೆ. ಬೀಡಿ ಮಾಲಕರು ಹಾಗೂ ಕಂಟ್ರಾಕ್ಟುದಾರರು ಈಗಲೂ ಕಾನೂನಿಗೆ ವಿರೋಧವಾಗಿದ್ದಾರೆ ಎಂಬುದನ್ನು ಬೀಡಿ ಕೆಲಸಗಾರರು ಮರೆಯಬಾರದು.

ಬೀಡಿ ಮಾಲಕರುಗಳಿಂದ ಸಿಗುತ್ತಿರುವ ಅನುಕೂಲತೆಗಳು ನೇರವಾಗಿ ಕೆಲಸಗಾರರ ಕೈಗೆ ಸಿಗುತ್ತಿಲ್ಲ. ಬೀಡಿ ಮಾಲಕರು ಕಂಟ್ರಾಕ್ಟುದಾರರ ಮುಖಾಂತರ ಕೆಲಸಗಾರರಿಗೆ ಕೊಡಿಸುತ್ತಿದ್ದಾರೆ, ಪರಿಣಾಮವಾಗಿ ಕೆಲಸಗಾರರಿಗೆ ಈ ಸವಲತ್ತುಗಳು ಸರಿಯಾಗಿ ಸಿಗದೇ ಅದರಲ್ಲಿ ಒಂದಂಶವನ್ನು ಕೆಲವು ಕಂಟ್ರಾಕ್ಟುದಾರರು ತಿಂದುಹಾಕುತ್ತಿರುವುದು ಬೀಡಿಕೆಲಸಗಾರರು ಅನುಭವದಿಂದ ತಿಳಿದಿದ್ದಾರೆ. ಈ ಪರಿಸ್ಥಿತಿ ಬದಲಾಗಿ ಬೀಡಿ ಮಾಲಕರು ಕೊಡುತ್ತಿರುವ ಕೂಲಿ, ಬೋನಸ್, ಹೆರಿಗೆಭತ್ತೆ ಮತ್ತಿತರ ಅನುಕೂಲತೆಗಳು ಪೂರ್ತಿಯಾಗಿ ಕೆಲಸಗಾರರಿಗೆ ಸಿಗಬೇಕಾದರೆ ಈ ಕಂಟ್ರಾಕ್ಟು ಪದ್ಧತಿ ನಿರ್ಮೂಲನವಾಗಿ ಬೀಡಿಮಾಲಕರೇ ನೇರವಾಗಿ ಕೆಲಸಗಾರರಿಂದ ಬೀಡಿಕಟ್ಟಿಸುವಂತಾಗಬೇಕೆಂದು ಕಾರ್ಮಿಕರು ಹೋರಾಟವನ್ನು ತೀವ್ರಗೊಳಿಸಬೇಕಾಗಿದೆ.

ಕಂಟ್ರಾಕ್ಟುದಾರರು ಕಾರ್ಮಿಕರಿಂದ ಎಲೆ ಮತ್ತು ತಂಬಾಕಿನ ಅವರೇಜನ್ನು ಹೆಚ್ಚಿಸಿ, ದಂಡ ವಸೂಲಿ ಮಾಡುತ್ತಿದ್ದು, ಈ ಅವರೇಜು ಎಷ್ಟು ಎಂದು ನಿರ್ಣಯವಿಲ್ಲ. ಈ ಬಗ್ಗೆ ಮಾಲಕರಿಗೆ ಮತ್ತು ಸರಕಾರಿ ಅಧಿಕಾರಿಗಳಿಗೆ ತಿಳಿಸಿದರೂ ಈವರೆಗೆ ಅದನ್ನು ನಿಲ್ಲಿಸಲು ಮುಂದಾಗಲಿಲ್ಲ. ಬೀಡಿ ಕಾರ್ಮಿಕರು ಪ್ರತಿಭಟಿಸಿದಾಗ, ಕಂಟ್ರಾಕ್ಟುದಾರರು ಕಿರುಕುಳಕೊಟ್ಟು ಅವರನ್ನು ಕೆಲಸದಿಂದ ಬಿಟ್ಟುಹೋಗುವಂತೆ ಪ್ರಯತ್ನ ಮಾಡುತ್ತಾರೆ.

ಲೋಗ್ ಪುಸ್ತಕ ಕೊಡದೆ ದುಡಿಸಿ, ಬೋನಸ್ ಇತ್ಯಾದಿಗಳನ್ನು ಸಾವಿರಗಟ್ಲೆ ಮೋಸಮಾಡುವ ಕಂಟ್ರಾಕ್ಟುದಾರರು ಹಲವರು ಇದ್ದಾರೆ. ಒಂದು ಕಡೆಯಿಂದ ಬೀಡಿ ತಯಾರಿಸುವ ಕಂಟ್ರಾಕ್ಟು ಲೈಸೆನ್ಸು ಪಡೆದು ನಾಲ್ಕೈದು ಕಡೆ ಬೀಡಿ ತಯಾರಿಸುವ ಕಂಟ್ರಾಕ್ಟುದಾರರೂ ಇದ್ದಾರೆ. ಕೆಲಸದ ಹೆದರಿಕೆ ತೋರಿಸಿ ಕನಿಷ್ಟ ಕೂಲಿಯನ್ನು ಕೊಡದೆ, ಕಾರ್ಮಿಕರ ಹೆಚ್ಚಿಟ್ಟು ಊಟಾ ದಸ್ಕತ್ತು ಪಡೆಯುವ ಕಂಟ್ರಾಕ್ಟುದಾರರು ಹಲವರಿದ್ದಾರೆ. ಹೆರಿಗೆ ಭತ್ತೆಯನ್ನು ಕಾನೂನು ಪ್ರಕಾರ ಪಾವತಿ ಮಾಡದೇ [illegible] ಕೊಡದೇ ಇರುವ ಬಗ್ಗೆ ಸರಕಾರ ಕಣ್ಣುಮುಚ್ಚಿ ಕೂತಿದೆ.

1978ರಿಂದ ಬೀಡಿ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡಿನ ಸವಲತ್ತು ಲಗಾವಾಗಿ ಮಜೂರರ ಮಜೂರಿಯಿಂದ ಕಂಟ್ರಾಕ್ಟುದಾರರು ತಮಗೆ ಇಷ್ಟ ಬಂದಂತೆ ಮಜಾ ಮಾಡುತ್ತಾ ಇದ್ದಾರೆ. ಈತನಕ ಇದರ ಲೆಕ್ಕ ಎಂಬುದು ಬೀಡಿಕಾರ್ಮಿಕರಿಗೆ ಸಿಕ್ಕಿಲ್ಲ. ಕೆಲವರು ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಪಾವತಿ ಮಾಡಲಿಲ್ಲ. ಓರ್ವ ಮಜೂರರ ಮಜೂರಿಯಿಂದ ಕಡಿತವಾದುದಕ್ಕೆ ಸರಿಯಾದ ಲೆಕ್ಕಪತ್ರ ಇಲ್ಲ. ಪ್ರತಿ ತಿಂಗಳು ಅಥವಾ ವಾರದಲ್ಲಿ "ವೇಜ್ ಸ್ಲಿಪ್" ಮುಖಾಂತರ ಲೆಕ್ಕಾಚಾರವನ್ನು ತಿಳಿಸಬೇಕು ಅಂತ ಕಾನೂನು ಇದ್ದರೂ, ಸಂಬಂಧಪಟ್ಟ ಅಧಿಕಾರಿಗಳನ್ನು ಈ ಬಗ್ಗೆ ಒತ್ತಾಯಿಸಿದ್ದರೂ ಯಾವ ಪರಿಣಾಮವೂ ಆಗುತ್ತಿಲ್ಲ.

ಆದ್ದರಿಂದ ಎಲ್ಲಾ ಬೀಡಿಕಾರ್ಮಿಕರು ಕಾನೂನಿನ ಸವಲತ್ತನ್ನು ಸಂಪೂರ್ಣ ಪಡೆಯಲು, ಕಂಟ್ರಾಕ್ಟುದಾರರ ಶೋಷಣೆಯನ್ನು ನಿಲ್ಲಿಸಲು ಸಂಘಟನೆಯನ್ನು ಬಲಪಡಿಸಲು ಮುಂದಾಗುವುದರೊಂದಿಗೆ, ಬೀಡಿ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಇತರ ಕಾರ್ಮಿಕ ವಿಭಾಗಗಳ ಜತೆಗೂಡಿ ಹೋರಾಡಲು ಸನ್ನದ್ಧರಾಗಬೇಕಾಗಿದೆ.

—ಕೆ. ಶಂಕರ್, ಕುಂದಾಪುರ

ಜಂಟೀ ಹೋರಾಟಕ್ಕೆ ಕರೆ

ಜನತೆಯು ಎದುರಿಸುತ್ತಿರುವ ಬೆಲೆ ಏರಿಕೆಯಂತಹ ಸಮಸ್ಯೆಗಳು ಮತ್ತು ಗ್ರಾಮೀಣ ಪ್ರದೇಶದ ಬಡಜನರು ಹಾಗೂ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕಾಗಿ ಜಂಟಿ ಹೋರಾಟ ನಡೆಸಲು ಸಿ.ಪಿ.ಐ. ಮತ್ತು ಸಿ.ಪಿ.ಐ (ಎಂ) ಪಕ್ಷಗಳ ದ.ಕ. ಜಿಲ್ಲಾ ಸಮಿತಿ ಸೆಕ್ರಿಟಾರಿಯೆಟ್‌ಗಳು ಜಂಟೀ ಸಭೆ ಸೇರಿ ತೀರ್ಮಾನಿಸಲಾಗಿದೆ. ರಾಜ್ಯದಲ್ಲಿ ಜಂಟೀ ಹೋರಾಟದ ಪ್ರಯತ್ನವನ್ನು ಸ್ವಾಗತಿಸಿದ ಸಭೆಯು ಬೆಲೆಏರಿಕೆ ವಿರುದ್ಧ ಪ್ರತಿಭಟಿಸಿ ಡಿಸೆಂಬರ್ 4 ರಂದು ಜಿಲ್ಲಾಧಿಕಾರಿಯವರ ಕಛೇರಿ ಎದುರು ಜಂಟೀಯಾಗಿ ಧರಣಿ ಸತ್ಯಾಗ್ರಹವನ್ನು ನಡೆಸಲು ನಿರ್ಣಯಿಸಿದೆ, ಹಳ್ಳಿಯ ಬಡವರ ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರವನ್ನು ಒತ್ತಾಯಿಸಲು 1981 ಜನವರಿ 11ರಂದು ಜಿಲ್ಲಾ ಕೇಂದ್ರದಲ್ಲಿ ಭಾರಿ ಮತಪ್ರದರ್ಶನ ನಡೆಸಲು ತೀರ್ಮಾನಿಸಲಾಗಿದೆ. ●

ಮುಷ್ಕರ ಮುಂದಕ್ಕೆ

ದ.ಕ.ಜಿಲ್ಲಾ ಆಟೋರಿಕ್ಷಾಚಾಲಕರ ಸಂಘದ ಕರೆಯ ಮೇರೆಗೆ 30-9-80 ರಂದು "ಜಿಲ್ಲಾ ರಿಕ್ಷಾ ಬಂದ್" ಯಶಸ್ವಿಯಾಗಿ ನಡೆದಿತ್ತು. 1-10-80 ರಿಂದ ಸರದಿ ಅನ್ನ ಸತ್ಯಾಗ್ರಹ ಆರಂಭವಾಗಿ 20-10-80ರಿಂದ 24 ಗಂಟೆಗಳ ಸರದಿ ಅನ್ನಸತ್ಯಾಗ್ರಹ ನಡೆದು ಅದು 10-11-80ರವರೆಗೆ ಮುಂದುವರೆಯಿತು. 10-11-80ರಂದು ಅನಿರ್ದಿಷ್ಟಕಾಲ ರಿಕ್ಷಾ ಬಂದ್ ಮತ್ತು ಧರಣಿ ಮುಷ್ಕರಗಳೂ ನಡೆದವು. ಈ ಮಧ್ಯೆ ಜಿಲ್ಲಾಧಿಕಾರಿಗಳು ಆಶ್ವಾಸನೆ ಕೊಟ್ಟಿರುವುದರಿಂದ ಮುಷ್ಕರವನ್ನು ಡಿಸೆಂಬರ್ 14ರವರೆಗೆ ಮುಂದೂಡಲಾಗಿದೆ. ಬೆಂಗಳೂರು ಮತ್ತು ಮಂಗಳೂರುಗಳ ರಸ್ತೆವ್ಯವಸ್ಥೆ, ಜನಸಂಖ್ಯೆ ಭಿನ್ನವಾಗಿರುವುದರಿಂದ ಎರಡು ನಗರಗಳಿಗೂ ರಿಕ್ಷಾ ಬಾಡಿಗೆಯನ್ನು ಭಿನ್ನ ರೀತಿಯಲ್ಲಿ ನಿಗದಿ ಮಾಡಬೇಕೆಂದು ಸಂಘ ಒತ್ತಾಯಿಸಿದೆ. ●

ಹೋರಾಟಕ್ಕಿಳಿದ ಶಿಕ್ಷಕರು

ಆರ್ಥಿಕ ಬಿಕ್ಕಟ್ಟು ಆಳವಾಗುತ್ತಿರುವ ಹಾಗೆ ಸಮಾಜದ ವಿವಿಧ ದುಡಿಯುವ ವರ್ಗಗಳೂ ತಮ್ಮ ಅಸ್ತಿತ್ವಕ್ಕೋಸ್ಕರ ಹೋರಾಟಕ್ಕಿಳಿಯಬೇಕಾದ ಅನಿವಾರ್ಯತೆ ಒದಗುವದು. ಹುಬ್ಬಳ್ಳಿ ಧಾರವಾಡ ನಗರಗಳ ಮಾಧ್ಯಮಿಕ ಶಾಲಾ ಶಿಕ್ಷಕರು ಮತ್ತು ನೌಕರರು ಇದಕ್ಕೆ ನಿದರ್ಶನವಿದ್ದಾರೆ.

ದಿನಾಂಕ 18-11-80ರಂದು ಶಿಕ್ಷಕರು ತಮ್ಮ ಬೇಡಿಕೆಗಳಷ್ಟೇ ಅಲ್ಲದೇ ಅವೈಜ್ಞಾನಿಕ ಪಠ್ಯಕ್ರಮವನ್ನು ವಿರೋಧಿಸಿ ಒಂದು ದಿನದ ಸಾಮೂಹಿಕ ರಜ ಹಾಕಿ ಎರಡೂ ನಗರಗಳಲ್ಲಿ ಏಕಕಾಲಕ್ಕೆ ಮೆರವಣಿಗೆ ನಡೆಸಿದರು.

ಧಾರವಾಡದ ಕಡಪಾ ಮೈದಾನದಿಂದ ಶಾಸಕ ಬಿ. ಎಸ್. ಹೊರಟ್ಟಿ ಮತ್ತು ಶಿಕ್ಷಕರ ಸಂಘದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ವಿ. ರಾಯಚೂರರವರ ನೇತೃತ್ವದಲ್ಲಿ ಮೆರವಣಿಗೆ ನಡೆದು ಧಾರವಾಡದ ಜಿಲ್ಲಾಧಿಕಾರಿ ಶ್ರೀಮತಿ ರೇಣುಕಾ ವಿಶ್ವನಾಥನ್‌ರಿಗೆ ಮನವಿ ಅರ್ಪಿಸಿದರು. ನಂತರ ನಡೆದ ಸಭೆಯನ್ನು ಉದ್ದೇಶಿಸಿ ಶ್ರೀ ಹೊರಟ್ಟಿ ಮತ್ತು ರಾಯಚೂರವರು ಮಾತನಾಡುತ್ತಾ ಬೇಡಿಕೆಗಳು ಈಡೇರದಿದ್ದರೆ ಹೋರಾಟವನ್ನು ತೀವ್ರಗೊಳಿಸುವ ಎಚ್ಚರಿಕೆಯನ್ನು ಸರಕಾರಕ್ಕೆ ನೀಡಿದರು. ಎಸ್. ಎಫ್. ಐ.ನ ಶ್ರೀ ಹಿರೇಮಠರು ಶಿಕ್ಷಕರ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿದರು.

ಹುಬ್ಬಳ್ಳಿಯ ಈದಗಾ ಮೈದಾನದಿಂದ ಪ್ರಾರಂಭವಾದ ಮೆರವಣಿಗೆಯ ನೇತೃತ್ವವನ್ನು ಶ್ರೀ ವಿಲ್ಸನ್ ಗಡ್ಡಿ ಮತ್ತು ಶ್ರೀ ಜಿ. ಎಸ್. ಕಲ್ಲಯ್ಯನಮಠ ವಹಿಸಿದ್ದರು. ಭಾಗವಹಿಸಿದ ಸುಮಾರು 600ಕ್ಕೂ ಹೆಚ್ಚು ಶಿಕ್ಷಕರಲ್ಲಿ ಹೆಚ್ಚಿನವರು ಶಿಕ್ಷಕಿಯರಿದ್ದರು. ಮೆರವಣಿಗೆಯನ್ನು ಕೊಂಡೊಯ್ದು ಹುಬ್ಬಳ್ಳಿಯ ತಹಸೀಲ್ದಾರರಿಗೆ ಮನವಿ ಅರ್ಪಿಸಲಾಯಿತು. ನಂತರ ಮಧ್ಯಾಹ್ನ 3 ಗಂಟೆಗೆ ನಡೆದ ಸಭೆಯನ್ನು ಉದ್ದೇಶಿಸಿ ಶ್ರೀ ವಿಲ್ಸನ್ ಗಡ್ಡಿ ಮಾತನಾಡುತ್ತಾ ಸರಕಾರದ ಶಿಕ್ಷಕರ ವಿರೋಧಿ ನೀತಿಯನ್ನು ಉಗ್ರವಾಗಿ ಖಂಡಿಸಿದರು. ಧಾರವಾಡದ ಸಭೆ ಮುಗಿಸಿ ಆಗಮಿಸಿದ ಶ್ರೀ ಹೊರಟ್ಟಿ ಮತ್ತು ಶ್ರೀ ರಾಯಚೂರರವರೂ ಮಾತನಾಡಿದರು. ಎ.ಐ.ಎಸ್.ಎಫ್. (AISF)ನ ಶ್ರೀ ಎಸ್. ಎ. ಮುಧೋಳರು ಬೆಂಬಲ ಸೂಚಿಸಿ ಮಾತನಾಡಿದರು. ಮೆರವಣಿಗೆ-ಸಭೆಗಳಲ್ಲಿ ಪಾಲ್ಗೊಂಡ ಶಿಕ್ಷಕರಲ್ಲಿ "ಹೋರಾಟವಿಲ್ಲದೇ ಏನನ್ನು ಸಾಧಿಸಲು ಸಾಧ್ಯವಿಲ್ಲ" ಎಂಬ ಮನೋಭಾವ ಕಂಡುಬರುತ್ತಿತ್ತು.

ಕೋಲಾರ ಜಿಲ್ಲೆಯಲ್ಲಿ ೬,೫೦೦ ರೈತರ ಬಂಧನ

ಅಕ್ಟೋಬರ್ 27ರಿಂದ ಪ್ರಾರಂಭವಾದ ರೈತ ಚಳುವಳಿ ಜಿಲ್ಲೆಯ, ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಮುಳಬಾಗಿಲು, ಶ್ರೀನಿವಾಸಪುರ, ಕೋಲಾರ, ಬಂಗಾರಪೇಟೆ ತಾಲ್ಲೂಕುಗಳಲ್ಲಿ ತೀವ್ರವಾಗಿದ್ದು ಮಾಲೂರು, ಗೌರಿಬಿದನೂರು ತಾಲ್ಲೂಕುಗಳಿಗೂ ಪಸರಿಸುತ್ತಿದೆ. ಜಿಲ್ಲೆಯಾದ್ಯಂತ ಈಗಾಗಲೇ 6500ಕ್ಕೂ ಹೆಚ್ಚು ರೈತರು, ಕೃಷಿಕೂಲಿಕಾರರು ಬಂಧಿತರಾಗಿದ್ದಾರೆ.

ಬಾಗೇಪಲ್ಲಿ :

ರಾಜ್ಯಕೇಂದ್ರಕ್ಕೆ ತಡವಾಗಿ ದೊರೆತ ವರದಿ ಪ್ರಕಾರ ದಿನಾಂಕ 17-11-80ರಂದು ಪ್ರಾರಂಭವಾದ ಪಿಕೆಟಿಂಗ ಕಾರ್ಯಕ್ರಮದಲ್ಲಿ 17ರಂದು 247 ಜನ, 18ರಂದು 433, 20ರಂದು 230, 21ರಂದು 117, 22ರಂದು 117, 24ರಂದು 299 ಮತ್ತು 25ರಂದು 192ಜನ ಹೀಗೆ ಒಟ್ಟು 1635 ಜನ ಬಂಧಿತರಾಗಿದ್ದರು. ಈ ಕಾರ್ಯಕ್ರಮ 29-11-80ರವರೆಗೂ ಮುಂದುವರಿದಿದ್ದು ಇನ್ನೂ 1000 ಜನ ಬಂಧಿತರಾದಿದ್ದ ವರದಿ ಬಂದಿದೆ.

○

ಯುವರಾಜ ಚಾರ್ಲ್ಸ್‌ಗೆ ಏರ್ಪಡಿಸಿದ್ದ ಔತಣ ಕೂಟಕ್ಕೆ ಕಾಂ. ಜ್ಯೋತಿರ್ಮಯಿ ಬಸು ತಿರಸ್ಕಾರ

ಭಾರತವನ್ನು ಸಂದರ್ಶಿಸಲು ಆಗಮಿಸಿರುವ ಬ್ರಿಟನ್ನಿನ ಯುವರಾಜ ಚಾರ್ಲ್ಸ್ ಗೌರವಾರ್ಥ ಏರ್ಪಡಿಸಿದ್ದ ಔತಣಕೂಟದಲ್ಲಿ ಪಾಲ್ಗೊಳ್ಳಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಲೋಕಸಭಾ ಸದಸ್ಯ ಕಾಂ ಜ್ಯೋತಿರ್ಮಯಿ ಬಸು ನಿರಾಕರಿಸಿದ್ದಾರೆ. ಈ ಬಗ್ಗೆ ರಾಷ್ಟ್ರಪತಿ ನೀಲಂ ಸಂಜೀವ ರೆಡ್ಡಿಯವರಿಗೆ ಪತ್ರವೊಂದನ್ನು ಬರೆದಿರುವರು.

"ಬ್ರಿಟನ್ನಿನಲ್ಲಿ ಭಾರತೀಯರಿಗೂ ಹಾಗೂ ಏಷ್ಯಾದ ಇತರ ರಾಷ್ಟ್ರಗಳಿಗೂ ಕೊಡುತ್ತಿರುವ ಕಿರುಕುಳ ಹೇಳುವಾದಲ್ಲ, ಬಿಳಿಯರಲ್ಲದವರ ಮೇಲೆ ದೈಹಿಕದಾಳಿಗಳು ದಿನನಿತ್ಯ ನಡೆಯುತ್ತಿವೆ. ಬ್ರಿಟಿಷ್ ವಿಮಾನ ನಿಲ್ದಾಣಗಳಲ್ಲಿ ಪ್ರಾಥಮಿಕ ಪರೀಕ್ಷೆಸಿಪದಲ್ಲಿ ಅಪಮಾನಗೊಳಿಸುತ್ತಿರುವ ದಂತೂ ಅಸಹನೀಯ. ದಿವಂಗತ ನೆಹರೂ ಬ್ರಿಟನ್ನಿಗೆ ಭೇಟಿ ಕೊಟ್ಟಾಗ ಅವರನ್ನು ಸ್ವಾಗತಿಸಲು ರಾಜಮನೆತನದ ಯಾರೂ ಆಗಮಿಸಿರಲಿಲ್ಲ. ವ್ಯಕ್ತಿಕವಾಗಿ ಯುವರಾಜ ಚಾರ್ಲ್ಸ್ ಬಂದಿಗವಾಗ ನಮ್ಮ ಮಂತ್ರಿ ಮಹೋದಯರೆಲ್ಲರೂ ವಿಮಾನ ನಿಲ್ದಾಣದಲ್ಲಿ ಮೇಳವಿಸಿದ್ದು ಅವಮಾನಕರವಾದದ್ದು. ಯಾವ ದೇಶದಲ್ಲಿ ವರ್ಣಭೇಧ ನೀತಿಯು ಇರುವುದೋ ಆ ದೇಶದ ಪ್ರತಿನಿಧಿಯಾಗಿ ಆಗಮಿಸಿರುವ ಚಾರ್ಲ್ಸ್ ಗೌರವಾರ್ಥ ಏರ್ಪಡಿಸಿರುವ ಕೂಟವನ್ನು ನಾನು ಬಹಿಷ್ಕರಿಸುತ್ತೇನೆ" ಎಂದು ಪತ್ರದಲ್ಲಿ ತಿಳಿಸಿರುವರು.

○

ಬೀದರದಲ್ಲಿ ರೈತರಿಂದ ಭಾರಿ ಮತ ಪ್ರದರ್ಶನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್ (ಯು) ಮತ್ತು ಜನತಾ ಪಕ್ಷಗಳ ನೇತೃತ್ವದಲ್ಲಿ ನವೆಂಬರ್ 21ರಂದು ಬೀದರ್ ನಗರದ ಅಂಬೇಡ್ಕರ್ ಚೌಕದಲ್ಲಿ ರೈತ ಮತ್ತು ಕೃಷಿಕೂಲಿಗಾರರ ಬೃಹತ್ ಮತಪ್ರದರ್ಶನ ನಡೆಯಿತು. ಸುಮಾರು ಎರಡು ಸಾವಿರಕ್ಕಿಂತಲೂ ಹೆಚ್ಚಿಗೆ ರೈತ-ಕೃಷಿಕೂಲಿಗಾರರು ಸೇರಿದ್ದ ಸಭೆಯನ್ನು ಉದ್ದೇಶಿಸಿ ಸಿ. ಪಿ. ಐ. (ಎಂ)ನ ಸುಂದರರಾಜ್, ಸಿ.ಪಿ.ಐ.ನ ಸ್ವಾಗಾಂಕರ್, ಜನತಾದ ಕಾಶಿನಾಥ್ ಬೇಲೂರೆ, ಕಾಂಗ್ರೆಸ್ (ಯು) ಮುಖಂಡ, ಕಿಸಾನ್ ಸಂಘರ್ಷ ಸಮಿತಿ ಸಂಚಾಲಕ ಕ್ರಿಸ್ಟಿ, ದಯಾನಂದ ಅಡ್ವೊಕೇಟ್, ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಸರಸಿಂಗ ರಾವ್ ಮೊದಲಾದವರು ಮಾತನಾಡಿ, ಸರಕಾರದ ರೈತವಿರೋಧಿ ನೀತಿಯನ್ನು ಖಂಡಿಸಿದರು. ನ್ಯಾಯ ದೊರೆಯುವ ತನಕ ಹೋರಾಡಲು ಕರೆ ಇತ್ತರು.

ಅಂಬೇಡ್ಕರ್ ಚೌಕದಿಂದ ನಗರದ ಬೀದಿಗಳಲ್ಲೆಲ್ಲಾ ಸುತ್ತಾಡಿ, ಮೆರವಣಿಗೆಯ ಮೂಲಕ ಜಿಲ್ಲಾಧಿಕಾರಿಯವರಲ್ಲಿಗೆ ಹೋಗಿ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ಅರ್ಪಿಸಲಾಯಿತು. ಬೇಡಿಕೆಗಳನ್ನು ಈಡೇರಿಸಲು ತನ್ನಿಂದಾದ ಪ್ರಯತ್ನ ಮಾಡುವ ಭರವಸೆಯನ್ನು ಜಿಲ್ಲಾಧಿಕಾರಿ ಇತ್ತರು. ಬೀದರ್ ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶವೆಂದು ಸಾರಬೇಕು; ಕಬ್ಬಿಗೆ ಟನ್ನಿಗೆ ರೂ. 300 ನಿಗದಿ ಮಾಡಬೇಕು, ಕೃಷಿ ಉತ್ಪನ್ನಗಳಿಗೆ ನ್ಯಾಯಬೆಲೆ ಸಿಗಬೇಕು; ರೈತರಿಗೆ ಮತ್ತು ಕೃಷಿಕೂಲಿಗಾರರಿಗೆ ಪೆನ್ಶನ್ ಸಿಗಬೇಕು; ಸಕ್ಕರೆ ಮತ್ತು ಸೀಮೆಎಣ್ಣೆ ವ್ಯವಸ್ಥಿತವಾಗಿ ಗ್ರಾಮಾಂತರ ಪ್ರದೇಶದಲ್ಲಿ ಹಂಚಬೇಕು; ರೈತರ ಸಾಲ ರದ್ದುಮಾಡಬೇಕು ಇತ್ಯಾದಿ ಬೇಡಿಕೆಗಳು ಮನವಿಯಲ್ಲಿ ಸೇರಿದ್ದುವು. ಈ ಬೇಡಿಕೆಗಳ ಈಡೇರಿಕೆಗಾಗಿ ಸರದಿ ಅನ್ನಸತ್ಯಾಗ್ರಹವನ್ನು ಪ್ರಾರಂಭಿಸಲಾಗಿದೆ

●

ಮುನಿಸಿಪಲ್ ನೌಕರರ ವೇತನ ಏರಿಕೆಗೆ ಒತ್ತಾಯ

ಹದಿನೈದು ವರ್ಷ ಸೇವೆ ಸಲ್ಲಿಸಿರುವ ಸರ್ಕಾರಿ ಕೆಳದರ್ಜೆ ನೌಕರರಿಗೆ ರೂ 250-400 ವೇತನಶ್ರೇಣಿಯನ್ನು ರೂ. 280–500ಕ್ಕೂ, ರೂ. 280 500 ಶ್ರೇಣಿಯನ್ನು ರೂ. 300-700ಕ್ಕೂ ಏರಿಸಲಾಗಿದೆಯೆಂದು ಕರ್ನಾಟಕ ಸರ್ಕಾರ ಆಜ್ಞೆ ಹೊರಡಿಸಿದೆ. ಆದರೆ ಈ ಶ್ರೇಣಿ ಮುನಿಸಿಪಲ್ ಆಡಳಿತದ ಕೆಳದರ್ಜೆ ನೌಕರರಿಗೂ ಅನ್ವಯಿಸುವುದೆಂಬ ಆಜ್ಞೆ ಹೊರಡಿಸಿಲ್ಲ. ಸರ್ಕಾರದ ಈ ತಾರತಮ್ಯ ನೀತಿಯನ್ನು ಸೌತ್ ಕೆನರಾ ಮುನಿಸಿಪಾಲ್ ಅಂಡ್ ಲೋಕಲ್ ಬೋರ್ಡ್ ವರ್ಕರ್ಸ್ ಯೂನಿಯನ್ ತೀವ್ರವಾಗಿ ವಿರೋಧಿಸುತ್ತದೆ,

ಈ ಸರ್ಕಾರಿ ಕೆಳದರ್ಜೆ ನೌಕರರ ಸಂಬಳಕ್ಕಿಂತ ಮುನಿಸಿಪಾಲ್ ನೌಕರರ ಸಂಬಳ 30ರೂ. ಕಡಿಮೆಯಿದೆ. ಹೊಸ ಶ್ರೇಣಿಯ ಜಾರಿಯಿಂದ ಇದು ಇನ್ನಷ್ಟು ಕಡಿಮೆಯಾಗುತ್ತದೆ. ಆದ್ದರಿಂದ ಹದಿನೈದು ವರ್ಷ ಸೇವೆ ಸಲ್ಲಿಸಿರುವ ಮುನಿಸಿಪಾಲ್ ನೌಕರರಿಗೂ ಆ ಶ್ರೇಣಿಯನ್ನೇ ಅನ್ವಯಿಸಬೇಕೆಂದು ಸರಕಾರಕ್ಕೆ ಒತ್ತಾಯಿಸುತ್ತದೆ,

●

ಗೇರುಬೀಜ ಕಾರ್ಖಾನೆಯಲ್ಲಿ ಆಡಳಿತ ವರ್ಗ ಇಂಟಕ್ ಪಿತೂರಿ ವಿಫಲ

ದ. ಕ. ಜಿಲ್ಲೆ ಮಂಗಳೂರಿನ ಜಫ್ಪ ಪಿಯರ್ಸ್‌ಲೆಸ್ಲೀ (ಇಂಡಿಯಾ) ಲಿಮಿಟೆಡ್‌ನ ಗೇರುಬೀಜ ಕಾರ್ಖಾನೆಯ 500ಕ್ಕೂ ಮಿಕ್ಕ ಮಹಿಳಾ ಕಾರ್ಮಿಕರು ಅತಿ ಕಡಿಮೆ ವೇತನಕ್ಕೆ ದುಡಿಯುತ್ತಿದ್ದಾರೆ. ಇಂಟಕ್‌ನವರು ಆಸೆತಮಿಷ ತೋರಿಸಿ ಕೆಲವೇ ಮಂದಿ ಕಾರ್ಮಿಕರನ್ನು ತಮ್ಮ ಯೂನಿಯನ್‌ಗೆ ಸೇರಿಸಿಕೊಂಡು ಇತರರಿಗೆ ಕಿರುಕುಳ ಕೊಡುತ್ತಿದ್ದರು. ಪಿಎಲ್. ಆಡಳಿತವರ್ಗದಿಂದಲೇ ಹುಟ್ಟಿ ಅವರ ಪಾಲನೆಯಿಂದಲೇ ಬೆಳೆದ ಕನಿಷ್ಠ ಕೂಲಿ ಬೇಡಿಕೆಗೆ ಇತರರು ಬೇಡಿಕೆ ಮುಂದಿಟ್ಟಾಗ ಇಂಟಕ್‌ನವರು ಮುನ್ಸೂಚನೆಯಿಲ್ಲದೆ ಕೆಲಸ ನಿಲ್ಲಿಸಿದರು. ಇದನ್ನೇ ನೆಪವಾಗಿಟ್ಟುಕೊಂಡ ಮಾಲೀಕರು 500 ಮಂದಿ ಮಹಿಳಾ ಕಾರ್ಮಿಕರನ್ನು ಕೆಲಸದಿಂದ ತೆಗೆದರು.

ಸಿಐಟಿಯುಗೆ ಸೇರಿದ ಕ್ಯಾಶ್ಯೂನಟ್ ಅಂಡ್ ಅಲೈಡ್ ವರ್ಕರ್ಸ್ ಯೂನಿಯನ್ ಕೆಲಸಕ್ಕಾಗಿ ಒತ್ತಾಯಿಸಿ ಒಂದವಾರ ಕಾರ್ಖಾನೆಯಲ್ಲಿ ಧರಣಿ ಸತ್ಯಾಗ್ರಹ ನಡೆಸಿತು. ನಂತರ ಶಪಿ ಮ್ಯಾನೇಜರರ ಕಚೇರಿಯ ಮುಂದೆಯೂ ಒಂದುವಾರ ಸತ್ಯಾಗ್ರಹ ನಡೆಸಿದರು. ನಂತರ ಮೆರವಣಿಗೆಯಲ್ಲಿ ಹೋಗಿ ಅಸಿಸ್ಟೆಂಟ್ ಲೇಬರ್ ಕಮೀಷನರ್ ಮತ್ತು ಪಿ.ಎಲ್. ಬ್ರ್ಯಾಂಚ್ ಮ್ಯಾನೇಜರ್ ಅವರಿಗೆ ಮನವಿ ಅರ್ಪಿಸಿ, ಕಾರ್ಮಿಕರ ಪರಿಸ್ಥಿತಿಯನ್ನು ವಿವರಿಸಿದರು. ಆದರೆ ಇದು ಫಲಕಾರಿಯಾಗದಿದ್ದಾಗ ಜಿಲ್ಲಾಧಿಕಾರಿಗಳಿಗೇ ಮನವಿ ಅರ್ಪಿಸಿ ಮಹಿಳಾ ಕಾರ್ಮಿಕರಿಗೆ ನ್ಯಾಯ ದೊರಕಿಸಬೇಕೆಂದು ಕೇಳಿಕೊಂಡರು. 4-11-80 ರಿಂದ ಪಿ ಎಲ್. ಬ್ರ್ಯಾಂಚ್ ಮ್ಯಾನೇಜರರ ಕಚೇರಿಯ ಒಳಗೆ ಮಹಿಳಾ ಕಾರ್ಮಿಕರು ಧರಣಿ ಮುಷ್ಕರ ಆರಂಭಿಸಿದರು. ಇಂಟಕ್‌ನವರು ಕರಾರು ಇಲ್ಲದೆ ಕೆಲಸಮಾಡುತ್ತೇವೆ ಎಂದು ಬರಹದ ಮೂಲಕ ಭರವಸೆ ಕೊಟ್ಟಾಗ ಕಾರ್ಖಾನೆ ಆರಂಭವಾಯಿತು. ಸಿಐಟಿಯು, ಎಐಟಿಯು.ಸಿ, ಬಿಎಂಎಸ್ ಸಂಘಗಳ ಒತ್ತಾಯದಿಂದ ಕೆಲಸವಿಲ್ಲದ ವೇಳೆಯಲ್ಲಿ ಸಾಲ ಕೊಡುವ ಒಪ್ಪಂದವೂ ಆಯಿತು. ಕೆಲಸವಿಲ್ಲದಾಗಲೂ ವೇತನ ಕೊಡಬೇಕೆಂದು ಕಾರ್ಮಿಕರು ಒತ್ತಾಯಿಸಿದರು. ಇಂಟಕ್‌ನ ಪ್ರಯತ್ನಕ್ಕೆ ಸೋಲುಂಟಾಯಿತು. ಕೆಂಬಾವುಟದ ಯೂನಿಯನ್ ಮಾತ್ರ ಕಾರ್ಮಿಕರ ಹಿತೈಷಿ ಎಂದು ಕಾರ್ಮಿಕರು ಅರಿತರು.

○

ವಿಚಾರವಾದಿಗಳ ಮೇಲೆ ಹಲ್ಲೆ ; ಲೋಹಿಯಾ ವೃತ್ತದ ಖಂಡನೆ

ಶಿವಮೊಗ್ಗದಲ್ಲಿ ಇತ್ತೀಚೆಗೆ ಆರ್. ಎಸ್.ಎಸ್. ಮತ್ತು ವಿದ್ಯಾರ್ಥಿ ಪರಿಷತ್ತಿನ ಮತಾಂಧ ಗೂಂಡಾಗಳು ವಿಚಾರವಾದಿಗಳ ಮೇಲೆ ಅಮಾನುಷ ಹಲ್ಲೆಯನ್ನು ಹಾಸನದ ಲೋಹಿಯಾ ಅಧ್ಯಯನ ವೃತ್ತ ತೀವ್ರವಾಗಿ ಖಂಡಿಸಿದೆ.

ಭಾರತದ ಸಹಸ್ರಾರು ಜನರು ಹಸಿವಿನಿಂದ ಸಾಯುತ್ತಿರುವಾಗ "ಯಾಗ" "ಯಜ್ಞ" ಮುಂತಾದ ಅರ್ಥಹೀನ ಕೆಲಸಗಳಿಗಾಗಿ ಅಧಿಕ ಪ್ರಮಾಣದ ಆಹಾರ ಪದಾರ್ಥಗಳನ್ನು ಬೆಂಕಿಗೆ ತೂರುವುದು ಅಸಹ್ಯದ ಸಂಗತಿಯೂ ಮಾನವ ವಿರೋಧೀ ಕೆಲಸವೂ ಆಗಿದೆ. ಇಂತಹ ಬಾಲಿಶವಾದ, ಪ್ರಗತಿ ವಿರೋಧಿಯಾದ ಅತಿರುದ್ರಯಾಗದ ಕೆಲಸಗಳನ್ನು ಪ್ರಜಾಸತ್ತಾತ್ಮಕವಾಗಿ ವಿರೋಧಿಸಿ ಜನರಲ್ಲಿ ಜಾಗೃತಿ ಮೂಡಿಸಿದ ಶಿವಮೊಗ್ಗದ ವಿಚಾರವಾದಿಗಳನ್ನು ಲೋಹಿಯಾ ಅಧ್ಯಯನ ವೃತ್ತ ಅಭಿನಂದಿಸಿದೆ.

ಪ್ರಜಾಸತ್ತಾತ್ಮಕ ತತ್ವಗಳನ್ನು ಗಾಳಿಗೆ ತೂರಿ ಹಿಂಸೆಯ ಮೂಲಕ ಎದುರಾಳಿಗಳ ಬಾಯನ್ನು ಮುಚ್ಚಿಸಲೆತ್ನಿಸಿದ ಮತಾಂಧರ ವಿರುದ್ಧ ಹೋರಾಡಲು ಎಲ್ಲಾ ಪ್ರಗತಿಶೀಲರೂ ಸಂಘಟಿತರಾಗಬೇಕೆಂದು ಲೋಹಿಯಾ ಅಧ್ಯಯನ ವೃತ್ತ ಕರೆ ನೀಡಿದೆ,

●

ಅಂತರಾಷ್ಟ್ರೀಯ ವಿದ್ಯಮಾನ

'ಸ್ವೀಡಿಶ್ ಮಾದರಿ'ಯ ಅಂತ್ಯ

ಆಧುನಿಕ ಬಂಡವಾಳಶಾಹಿ ಸಮಾಜಗಳಲ್ಲಿ ಬಂಡವಾಳಶಾಹಿ ಆರ್ಥಿಕತೆಯನ್ನು ನಾಶ ಮಾಡದೆ, ಉತ್ಪಾದನಾ ಸಾಮಗ್ರಿಗಳನ್ನು ಖಾಸಗಿ ಒಡೆತನದಿಂದ ಬಿಡಿಸಿ, ಸಾಮಾಜಿಕ ಒಡೆತನಕ್ಕೆ ತರದೆ (ಅದೂ ಕಾರ್ಮಿಕ ವರ್ಗದ ಎಡೆ ಬಿಡದ ವರ್ಗಸಂಘರ್ಷಗಳಿಂದ) ನಿಜವಾದ ಸಮಾಜವಾದದತ್ತ ಹೋಗುವುದು ಸಾಧ್ಯವಿಲ್ಲ ಎಂಬುದು ಮಾರ್ಕ್ಸ್‌ವಾದದ ಮೂಲಭೂತ ನಿಲುವುಗಳಲ್ಲೊಂದು. ನಮ್ಮ ದೇಶವೂ ಸೇರಿದಂತೆ ಹೆಚ್ಚಿನ ಬಂಡವಾಳಶಾಹಿ ದೇಶಗಳಲ್ಲಿ, ಬಂಡವಾಳಶಾಹಿ ವರ್ಗದ ಪ್ರತಿನಿಧಿಯಾದ ಆಳುವ ಪಕ್ಷಗಳು ಬಂಡವಾಳಶಾಹಿಯ ಮೇಲೆ ಕೆಲವು ಕಟ್ಟುಪಾಡುಗಳನ್ನು ಮಾತ್ರ ಹಾಕಿ ಹಾಗೂ ಅದರ ಆರ್ಥಿಕತೆಯಲ್ಲಿ ಪ್ರಭುತ್ವ (State) ಸ್ವಲ್ಪ ಪ್ರಮಾಣದಲ್ಲಿ ಮಧ್ಯಪ್ರವೇಶಿಸುವ ಮಿಶ್ರ ಆರ್ಥಿಕತೆಯಲ್ಲಿ ಯಾವುದೇ ಮೂಲಭೂತ ಆಂತರಿಕ ವಿರೋಧಾಭಾಸಗಳಿಲ್ಲ; ಇಂತಹ ಆರ್ಥಿಕತೆಯು ಅಧಿಕ ಮೌಲ್ಯವನ್ನು ಜನಕಲ್ಯಾಣಕ್ಕೆ ಉಪಯೋಗಿಸಬಹುದು' ಎಂದು ನಂಬಿವೆ. ಇದನ್ನು ಸುಖೀ ಪ್ರಭುತ್ವ ಅಥವಾ 'ಕಲ್ಯಾಣ ಪ್ರಭುತ್ವ' (Welfare State) ಎಂಬ ಹೆಸರಿನಿಂದ ಪ್ರಸಿದ್ಧಿ ಪಡಿಸಲಾಗಿದೆ. ಹೆಚ್ಚಿನ ಬಂಡವಾಳಶಾಹಿ ಪ್ರಭುತ್ವಗಳು ತಮ್ಮನ್ನು ಹೀಗೆಂದು ಅಥವಾ ಇದನ್ನು ಸ್ಥಾಪಿಸುವುದೂ ತಮ್ಮ ಉದ್ದೇಶವೆಂದು ದುಡಿಯುವ ಜನರನ್ನು ನಂಬಿಸಲು ಪ್ರಯತ್ನಿಸಿವೆ. ಕೆಲವು ದೇಶದ ಸಮಾಜವಾದಿ ಪಕ್ಷಗಳು ಸಹ ಇದನ್ನು ನಂಬಿದ್ದನ್ನು ಕಾಣಬಹುದು.

ಸ್ವೀಡನ್ ಈ ಕಲ್ಯಾಣ ಪ್ರಭುತ್ವದ ಮಾದರಿ ದೇಶ; ಆಧುನಿಕ ಸಮಾಜವಾದದ ಮಾದರಿ; ಕಮ್ಯುನಿಸ್ಟ್ ಪಕ್ಷಗಳ ನೇತೃತ್ವದಲ್ಲಿರುವ ರಷ್ಯಾ ಮುಂತಾದ ದೇಶಗಳಲ್ಲಿರುವುದು '19ನೇ ಶತಮಾನದ ಸಮಾಜವಾದ' ಇತ್ಯಾದಿಯಾಗಿ ಬೂರ್ಜ್ವಾ ಪ್ರಚಾರ ಯಂತ್ರಗಳಲ್ಲಿ ಸಾರಲಾಗುತ್ತಿತ್ತು. ನಮ್ಮ ದೇಶದ ಪ್ರಮುಖ ಕೈಗಾರಿಕೋದ್ಯಮಿ ಟಾಟಾ ಸಹ ಕೆಲವು ವರ್ಷಗಳ ಹಿಂದೆ ಇದೇ ಮಾತನ್ನು ಹೇಳಿದ್ದರು.

ಮಾರ್ಕ್ಸ್‌ವಾದಿಗಳು ಬಂಡವಾಳಶಾಹಿ ದಮನಕಾರಿ ಪ್ರಭುತ್ವಗಳನ್ನು ಕಲ್ಯಾಣ ಪ್ರಭುತ್ವಗಳು ಎಂದು ಎಂದೂ ಒಪ್ಪಿರಲಿಲ್ಲ ಮಾತ್ರವಲ್ಲ ಅದರ ಹಿಂದಿರುವ ಮೋಸವನ್ನು ಬಯಲಿಗೆಳೆಯಲು ಪ್ರಯತ್ನಿಸುತ್ತಾ ಬಂದಿದ್ದಾರೆ.

ಒಂದು ಹಗಲು ಕನಸಿನ ಕೊನೆ

ಬೂರ್ಜ್ವಾಗಳು ಸ್ವೀಡನ್, ನಿರುದ್ಯೋಗವಿಲ್ಲದ, ಬಂಡವಾಳಶಾಹಿ ಹಣದುಬ್ಬರ, ಇಳಿತಗಳಿಲ್ಲದ, ವರ್ಗಸಂಘರ್ಷಗಳಿಲ್ಲದ, ಅದರ ಅಗತ್ಯವಿಲ್ಲದ 'ಕಲ್ಯಾಣ ಪ್ರಭುತ್ವ'ಕ್ಕೆ ಉತ್ತಮ ಮಾದರಿಯಾಗಿ ಉಳಿಯಬಹುದು ಎಂದು ಹಗಲುಗನಸು ಕಂಡಿದ್ದರು.

ಈ ಹಗಲುಗನಸನ್ನು ಕೊನೆಗಾಣಿಸುವ ಕೆಲಸವನ್ನು ಸ್ವೀಡನ್‌ನ ಕಾರ್ಮಿಕವರ್ಗ ಇತ್ತೀಚೆಗೆ ಮಾಡಿತು.

2–3 ತಿಂಗಳುಗಳ ಹಿಂದೆ ಸ್ವೀಡನ್‌ನಲ್ಲಿ ಇತ್ತೀಚಿನ ದಶಕಗಳಲ್ಲಿ ಅತಿ ದೊಡ್ಡದಾದ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಯಿತು. ಎಲ್ಲಾ ವಿಭಾಗಗಳು ಸೇರಿದಂತೆ ಸುಮಾರು 10 ಲಕ್ಷ ಕಾರ್ಮಿಕರು ಇದರಲ್ಲಿ ಪಾಲುಗೊಂಡರು ಇದರಲ್ಲಿ ಸರ್ಕಾರಿ ನೌಕರರು, ಸರ್ಕಾರಿ ಕಂಪೆನಿಗಳ ಖಾಸಗಿ ಕಂಪೆನಿ, ಕಾರ್ಪೊರೇಷನ್‌ಗಳ ಕಾರ್ಮಿಕರು ಎಲ್ಲರೂ ಸೇರಿದ್ದರು.

ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರದ ಮುಖ್ಯ ಬೇಡಿಕೆ ಬಹಳ ಸಮಯದಿಂದ ಹಿಂದೂಡಲ್ಪಟ್ಟಿದ್ದ ವೇತನಗಳ ಏರಿಕೆ. ಬಂಡವಾಳಶಾಹಿ ಸರ್ಕಾರ ಮತ್ತು ಮಾಲೀಕರ ಸಂಘಟನೆ ಎಸ್. ಎ. ಎಫ್ ಯಾವುದೇ ವೇತನ ಏರಿಕೆಗೆ ಸಿದ್ಧವಿರಲಿಲ್ಲ, ಸ್ವೀಡನ್‌ನಂತಹ 'ಪೂರ್ಣ ಕಲ್ಯಾಣ ಪ್ರಭುತ್ವ'ದಲ್ಲಿ ಇದು ಅಗತ್ಯವಿಲ್ಲ ಎಂದು ಅದರ ನಿಲುವಾಗಿತ್ತು

ದೇಶದಾದ್ಯಂತ ಕಾರ್ಮಿಕವರ್ಗ ಸಂಘಟಿತ ಹೋರಾಟ ನಡೆಸಲು ನಿರ್ಧರಿಸಿದರು. ಕಾರ್ಮಿಕರ ಹೋರಾಟದ ಭಾವನೆ ಎಲ್ಲಾ ಎಲ್ಲೆಗಳನ್ನೂ ಮೀರಿತ್ತು. ಮುಷ್ಕರದ ಸಭೆಗಳಲ್ಲಿ, ಸಾಕಷ್ಟು ಸಿದ್ಧತೆ ಇಲ್ಲದಾಗ್ಯೂ, ಕಾರ್ಮಿಕರು ಭಾರಿ ಸಂಖ್ಯೆಯಲ್ಲಿ ಭಾಗವಹಿಸಿದರು.

ಬಂಡವಾಳಶಾಹಿಗಳ ಸಂಘಟನೆ ಎಸ್. ಎ. ಎಫ್. ಮತ್ತು ಸರಕಾರ ಈ ವರ್ಷ ಕಾರ್ಮಿಕರ ಟ್ರೇಡ್‌ಯೂನಿಯನ್ ಹಕ್ಕುಗಳ ಮೇಲೆ ತೀವ್ರ ಆಕ್ರಮಣ ನಡೆಸಲು ನಿರ್ಧರಿಸಿತ್ತು. ಇದರ ಮೊದಲ ಹಂತವಾಗಿ ವೇತನ ಏರಿಕೆಯ ಬೇಡಿಕೆಯನ್ನು ಪೂರ್ಣವಾಗಿ ತಿರಸ್ಕರಿಸುವ ಧೋರಣೆ ತಳೆದಿತ್ತು. ಇದರಲ್ಲಿ ಸಫಲವಾದರೆ ಟ್ರೇಡ್‌ಯೂನಿಯನ್‌ಗಳ ಶಕ್ತಿಯ ದಮನ ಮುಂದಿನ ಹೆಜ್ಜೆಯಾಗಿತ್ತು.

ಶೇಕಡ ೭ ವೇತನ ಏರಿಕೆಗೆ ಒಪ್ಪಿಗೆ

ಆದರೆ ಸ್ವೀಡನ್‌ನ ಕಾರ್ಮಿಕವರ್ಗದ ಐಕ್ಯಹೋರಾಟದ ಅಗಾಧತೆಯ ಎದುರು ಇವರ ಆಟ, ಹಟಮಾರಿ ಧೋರಣೆ ನಡೆಯಲಿಲ್ಲ ಸ್ವೀಡನ್ ಬಂಡವಾಳಶಾಹಿ ದೇಶಗಳಲ್ಲೇ ಅತಿ ಹೆಚ್ಚು ಸಂಘಟಿತವಾದ ಕಾರ್ಮಿಕವರ್ಗವಿರುವ ದೇಶ ದೇಶದ ಕಾರ್ಮಿಕರಲ್ಲಿ ಸುಮಾರು ಶೇಕಡಾ ೬0ಕ್ಕೂ ಹೆಚ್ಚು ಕಾರ್ಮಿಕರು ದೇಶವ್ಯಾಪಿ ಟ್ರೇಡ್‌ಯೂನಿಯನ್‌ಗಳಲ್ಲಿ ಸಂಘಟಿತವಾಗಿದ್ದಾರೆ. ಇಡೀ ದೇಶವನ್ನೇ ನಡುಗಿಸಿದ ಸಾರ್ವತ್ರಿಕ ಮುಷ್ಕರದಿಂದ ಗಾಬರಿಗೊಂಡ ಸರ್ಕಾರ ಮತ್ತು ಬಂಡವಾಳಶಾಹಿವರ್ಗ ಶೇಕಡಾ 7 ವೇತನ ಏರಿಕೆಗೆ ಒಪ್ಪಬೇಕಾಯಿತು.

ಬಂಡವಾಳಶಾಹಿ ವರ್ಗದ ಹಟಮಾರಿ ಧೋರಣೆ, ಸ್ವಾಭಿಮಾನ ಧೂಳೀಪಟವಾಯಿತು. ಅದಕ್ಕೆ ಕಾರ್ಮಿಕ ವರ್ಗದ ಶಕ್ತಿ ಇನ್ನೊಮ್ಮೆ ಮನದಟ್ಟಾಯಿತು. ಇದು ಸ್ವೀಡನ್ನಿನ ಮುಖ್ಯ ಪತ್ರಿಕೆ 'ಡಾಗೆನ್ಸ್ ನ್ಯಾಹಿಟರ್' ಮುಷ್ಕರದ ನಂತರ ಬರೆದ ಸಂಪಾದಕೀಯದಿಂದ ತಿಳಿಯುತ್ತದೆ. "ಟ್ರೇಡ್ ಯೂನಿಯನುಗಳು ಈ ಮುಷ್ಕರದಿಂದ ಏನು ಸಾಧಿಸಿವೆ? SAF ಮತ್ತು ಸರಕಾರವನ್ನು ಶರಣಾಗತರನ್ನಾಗಿ ಮಾಡುವ ಶಕ್ತಿಯನ್ನು ಪ್ರದರ್ಶಿಸಿದೆ. ಸರ್ಕಾರ ಧೋರಣೆ, ನೀತಿಗಳೆಲ್ಲಾ ನೆಲಸಮವಾಗಿದೆ."

ಮುಷ್ಕರದ ವಿಶೇಷತೆಗಳು

1909ರ ನಂತರ ನಡೆದ ದೊಡ್ಡ ಸಾರ್ವತ್ರಿಕ ಮುಷ್ಕರದ ನಂತರ ಬಹುಶಃ ಆ ಪ್ರಮಾಣದಲ್ಲಿ ಸ್ವೀಡನ್‌ನಲ್ಲಿ ನಡೆಯುವುದು ಇದೇ. ಇದರಲ್ಲಿ ಹಿಂದೆಂದೂ ಮಹಾ ಮುಷ್ಕರಗಳಲ್ಲಿ ಭಾಗವಹಿಸದ ಹೊಸ ಜನಾಂಗದ ಕಾರ್ಮಿಕರು ತಮ್ಮ ಜೀವನದಲ್ಲೇ ಪ್ರಥಮ ಭಾರಿ ಈ ರೀತಿಯ ಸಾಮೂಹಿಕ ಕಾರ್ಯಾಚರಣೆಯಲ್ಲಿ ಭಾಗವಹಿಸಿದರು. ಈ ಹೋರಾಟದಲ್ಲಿ ಕಾರ್ಮಿಕರು ವರ್ಗ ಸಂಘರ್ಷದ ಪ್ರಥಮ ಪಾಠಗಳನ್ನು ಕಲಿಯುವಂತಾಗಿದೆ. ಸಾಮಾನ್ಯವಾಗಿ ಹೇಳುವುದಾದರೆ, ಕಾರ್ಮಿಕರಲ್ಲಿ ಈ ಮುಷ್ಕರದ ನಂತರ ತಮ್ಮ ಬಲದಲ್ಲಿ ಹೆಚ್ಚು ನಂಬಿಕೆ ಬಂದಿದೆ ಈ ಹೋರಾಟದ ವಿಜಯದ ಮಹತ್ವ, 7% ವೇತನ ಏರಿಕೆಗಿಂತಲೂ ಹೆಚ್ಚಾಗಿ ಬಂಡವಾಳಶಾಹಿ ವರ್ಗ ಮತ್ತು ಅದರ ಸರಕಾರ ವೇತನ ಸ್ಥಂಭನ ಮತ್ತು ಸರ್ಕಾರಿ ಆದಾಯ ನೀತಿಯನ್ನು ಜಾರಿಗೆ ತರುವುದನ್ನು ಯಶಸ್ವಿಯಾಗಿ ತಡಹಿಡಿಯುವುದರಲ್ಲಿದೆ.

1909ರ ಮಹಾ ಮುಷ್ಕರಗಳ ನಂತರ ಹಲವು ಟ್ರೇಡ್‌ಯೂನಿಯನುಗಳು ಒಡೆದಿದ್ದವು, ಬಲಹೀನವಾಗಿದ್ದವು ಟ್ರೇಡ್‌ಯೂನಿಯನುಗಳ ಸದಸ್ಯತ್ವವೂ ಕಡಿಮೆಯಾಗಿತ್ತು. ಆದರೆ ಈ ಮುಷ್ಕರದ ನಂತರ ತೀರಾ ವಿರುದ್ಧ ಬೆಳವಣಿಗೆಗಳು ಕಂಡುಬರುತ್ತಿವೆ. ಟ್ರೇಡ್‌ಯೂನಿಯನುಗಳು ಈ ಮುಷ್ಕರದಿಂದ ಬಲಶಾಲಿಯಾಗಿ ಮುನ್ನಡೆದಿವೆ. ಈ ಮುಷ್ಕರದ ಸಮಯದಲ್ಲಿ ಮತ್ತು ನಂತರ ಸದಸ್ಯತ್ವ ಏರುತ್ತಾ ನಡೆದಿದೆ.

ಎಲ್ಲಕ್ಕಿಂತಲೂ ಹೆಚ್ಚು ಮಹತ್ವದ ಪರಿಣಾಮ; ಸ್ವೀಡಿಶ್ ಮಾದರಿ 'ಸಮಾಜವಾದದ' 'ಕಲ್ಯಾಣ ಪ್ರಭುತ್ವ'ಕ್ಕೆ ಮಂಗಳ ಹಾಡಿದ್ದು. ಯಾವುದೇ ಬಂಡವಾಳಶಾಹಿ ಸಮಾಜದಲ್ಲಿ (ಇದೂ ಒಂದು ವರ್ಗಸಮಾಜವಾದ್ದರಿಂದ) ಸ್ವಲ್ಪ ಸಮಯ ಕೆಲವು ದೇಶಗಳ ವಿಶಿಷ್ಟ ಚಾರಿತ್ರಿಕ ಪರಿಸ್ಥಿತಿಯಿಂದ, ವಿಶಿಷ್ಟ ಅಂತರಾಷ್ಟ್ರೀಯ ಬೆಳವಣಿಗೆಗಳಿಂದ ಸ್ವಲ್ಪ ಮಟ್ಟಿನ ಸಾಮರಸ್ಯವಿದ್ದು, ಸುಮಾರಾಗಿ ಸುಭದ್ರ ಆರ್ಥಿಕತೆ ಇರಬಹುದಾದರೂ; ಒಂದಲ್ಲ ಒಂದು ದಿನ ತೀವ್ರ ವರ್ಗಸಂಘರ್ಷಗಳು ನಡೆದೇ ನಡೆಯುತ್ತವೆ ಎಂಬುದು ಇನ್ನೊಮ್ಮೆ ಸ್ಪಷ್ಟವಾಗಿದೆ. ವರ್ಗಗಳ ನಾಶವಾಗದೆ ನಿಜವಾದ ಸುಭದ್ರ ಆರ್ಥಿಕತೆಯನ್ನಾಗಲಿ ಸಾಮರಸ್ಯ, ಶಾಂತಿಯಿರುವ ಸಮಾಜವನ್ನಾಗಲಿ ನಿರ್ಮಿಸಲು ಸಾಧ್ಯವಿಲ್ಲ ಎಂಬ ಮಾರ್ಕ್ಸ್‌ವಾದದ ಮೂಲ ತಿರುಳು ಸಮಯದ ಪರೀಕ್ಷೆಯನ್ನು ಇನ್ನೊಮ್ಮೆ ಗೆದ್ದಿದೆ.

●

ಹೋರಾಟ ಸಮಿತಿ ರಚನೆ

ಸಾರ್ವಜನಿಕ ಉದ್ದಿಮೆಗಳಾದ (Public Sector) ಐ ಟಿ ಐ., ಎಚ್. ಎ. ಎಲ್., ಎಚ್. ಎಮ್. ಟಿ, ಬಿ. ಇ. ಎಂ. ಎಲ್ ಮತ್ತು ಬಿ. ಇ. ಎಲ್. ಗಳಿಗೆ ಸೇರಿದ ಕಾರ್ಮಿಕರು ತಾ. 1-12-80 ರಂದು ಸಮಾವೇಶಗೊಂಡು ಬಿ ಎಚ್. ಇ. ಎಲ್ ಒಪ್ಪಂದದ ಪ್ರಕಾರ, ದೊರೆತ ವೇತನ ಹೆಚ್ಚಳವನ್ನು ದೊರಕಿಸುವುದಕ್ಕೋಸ್ಕರ ಹೋರಾಟ ಮಾಡಲು ನಿರ್ಧರಿಸಿದರು.

ಈ ಸಮಾವೇಶವನ್ನು ಬಿ. ಇ. ಎಲ್. ನ "ಭಾರತ ಇಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್" ಸಂಘಟಿಸಿತ್ತು. ಸಮಾವೇಶಕ್ಕೆ ಸಾರ್ವಜನಿಕ ಉದ್ಯಮಗಳ ಎಲ್ಲಾ ಕಾರ್ಮಿಕ ಸಂಘಗಳ ಪ್ರತಿನಿಧಿಗಳಿಗೂ, ಕಾರ್ಮಿಕ ಧುರೀಣರಿಗೂ ಆಮಂತ್ರಿಸಿದ್ದರೂ ಸಿ. ಐ. ಟಿ ಯು ಧುರೀಣರು ಮಾತ್ರ ಪಾಲ್ಗೊಂಡಿದ್ದರು ಆದರೂ ಬೇರೆ ಸಂಘಗಳ ಸಕ್ರಿಯ ಕಾರ್ಯಕರ್ತರು ಭಾಗವಹಿಸಿದ್ದರು.

ಬೇರೆ ಬೇರೆ ಫ್ಯಾಕ್ಟರಿಗಳಿಗೆ ಸೇರಿದ ಕಾರ್ಮಿಕರು ಮಾತನಾಡುತ್ತಾ, ಬಿ. ಎಚ್. ಇ. ಎಲ್. ಒಪ್ಪಂದವನ್ನು ವಿವರಿಸುತ್ತಾ, ಆ ಒಪ್ಪಂದದ ಪ್ರಕಾರ ಹೆಚ್ಚಳವಾದ ರೂ. 78 ತಾವು ಪಡೆಯಲೇಬೇಕೆಂದು ನಿರ್ಧರಿಸಿದರು. ಈ ಬಗ್ಗೆ ಕಾರ್ಮಿಕರನ್ನು ಜಾಗೃತಗೊಳಿಸಿ ಆಡಳಿತವರ್ಗದ ಕುತಂತ್ರವನ್ನು ಸದೆಬಡಿಯಬೇಕೆಂದು ಒಮ್ಮತದಿಂದ ತೀರ್ಮಾನಿಸಲಾಯಿತು.

ಈ ಸಮಯದಲ್ಲಿ ರಚಿತವಾಗಿರುವ ಹೋರಾಟ ಸಮಿತಿಗೆ, ಏರಿಯಾ ಮೀಟಿಂಗ್, ಗೇಟ್ ಮೀಟಿಂಗ್ ಮುಂತಾದ ಜವಾಬ್ದಾರಿಯನ್ನು ವಹಿಸಲು ತೀರ್ಮಾನಿಸಿತು. ಹಾಗೂ ಎಲ್ಲ ಕಾರ್ಮಿಕಸಂಘಗಳಿಗೂ ಸಹಕರಿಸುವಂತೆ ವಿನಂತಿಸಿಕೊಂಡು ಐಕ್ಯ ಹೋರಾಟಕ್ಕೆ ಗಮನಕೊಡಬೇಕೆಂದು ನಿರ್ಧರಿಸಲಾಯಿತು.

ಕಾಂ. ಡಿ ಎಸ್ ಈಶ್ವರ (ಬಿ ಇ ಎಲ್), ಶಾಮಣ್ಣ ರೆಡ್ಡಿ (ಐ ಟಿ ಐ) ಕರಗಯ್ಯ, (ಎಚ್ ಎ ಎಲ್) ಮತ್ತು ಸಿ ಐ ಟಿ ಯು ವಿನಿಂದ ಕಾಂ ವಿ ಜೆ ಕೆ ನಾಯರ್ ಇವರುಗಳ ಅಧ್ಯಕ್ಷ ಮಂಡಳಿಯಲ್ಲಿ ಸಮಾವೇಶ ಜರುಗಿತು. ಸಿ ಐ ಟಿ ಯು ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್, ಭಾರತ ಇಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್‌ನ ಕಾಂ. ಎಂ ಎಸ್ ಸಿ ರಾವ್ ಎಚ್ ಎ ಎಲ್ ನ ಕಾಂ. ಕೆ. ಎಸ್. ಕೃಷ್ಣಮೂರ್ತಿ ಮೊದಲಾದವರು ಮಾತನಾಡಿದರು. ○

ರೈತರ ರ್‍ಯಾಲಿಯ ಬೆಂಬಲಾರ್ಥವಾಗಿ ಸಿ ಐ ಟಿಯು ಸಂಘಗಳ ೧ ದಿನದ ಸಾಂಕೇತಿಕ ಮುಷ್ಕರ

ಡಿಸೆಂಬರ್ 12ರಂದು ಬೆಂಗಳೂರಿನಲ್ಲಿ ನಡೆಯಲಿರುವ ರೈತ ಕಾರ್ಮಿಕರ ಬೃಹತ್ ರ್‍ಯಾಲಿಯ ಬೆಂಬಲಾರ್ಥವಾಗಿ ಸಿ ಐ ಟಿ ಯು. ಗೆ ಸೇರಿದ ಸಂಘಗಳು ಒಂದು ದಿನದ ಮುಷ್ಕರಕ್ಕೆ ಕರೆ ಕೊಟ್ಟಿರುವರು.

ದಿನಾಂಕ 2-12-80 ರಂದು ನಡೆದ ಕಾರ್ಮಿಕ ಪ್ರತಿನಿಧಿಗಳ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಡಿಸೆಂಬರ್ 12 ರ ರ್‍ಯಾಲಿಯ ನಿಮಿತ್ತ ರಚಿಸಲಾದ ಸ್ವಾಗತ ಸಮಿತಿಗೆ ಅಧ್ಯಕ್ಷರಾಗಿ ಕಾಂ. ಎಸ್. ಸೂರ್ಯನಾರಾಯಣ ರಾವ್, ಕಾರ್ಯದರ್ಶಿಯಾಗಿ ಕಾಂ. ವಿ ಜೆ. ಕೆ. ನಾಯರ್ ಮತ್ತು ಉಪಾಧ್ಯಕ್ಷರಾಗಿ ಕಾಂ. ಪಿ ಜಗನ್ನಾಥ ಆಯ್ಕೆಯಾಗಿದ್ದಾರೆ.

ರೈತ ಕಾರ್ಮಿಕರ ಸೌಹಾರ್ದತೆಯ ಸಂಕೇತವಾಗಿ ಈ ರ್‍ಯಾಲಿಯನ್ನು ಯಶಸ್ವಿಗೊಳಿಸಬೇಕೆಂದು ಸ್ವಾಗತ ಸಮಿತಿ ವಿನಂತಿಸಿಕೊಳ್ಳುತ್ತದೆ.

○

ಜನತೆ ಹತೋಟಿ ತಪ್ಪುತ್ತಿದ್ದಾರೆ

(1ನೇ ಪುಟದಿಂದ)

ಮಧ್ಯಮವರ್ಗದ ಉದ್ಯೋಗಿಗಳ ಚಳುವಳಿ, ಗ್ರಾಹಕರು ಬೆಲೆಏರಿಕೆಯ ವಿರುದ್ಧ ನಡೆಸುತ್ತಿರುವ ಚಳುವಳಿ, ರೈತರು ಒಳ್ಳೆಯ ಬೆಂಬಲ ಬೆಲೆಗಳಿಗಾಗಿ ನಡೆಸುತ್ತಿರುವ ಚಳುವಳಿ, ಇವೆಲ್ಲವೂ ಒಂದರ ಜೊತೆ ಒಂದು ಬೆರೆತಿವೆ. ಇವೆಲ್ಲವೂ ಗುತ್ತೇದಾರಿ ಬಂಡವಾಳಶಾಹಿಗಳನ್ನು ವಿರೋಧಿಸುತ್ತವೆ

ವಿನಾಶದ ಅಪಾಯ

ತಮ್ಮ ಬೆನ್ನ ಮೇಲಿರುವ ವಿವಿಧ ಹೊರೆಗಳ ವಿರುದ್ಧ ರೈತರಿಗೆ ಇರುವ ಅಸಮಾಧಾನವು ವಿನಾಶದ ಹಾದಿಗಳನ್ನು ಹಿಡಿಯುವ ಅಪಾಯವೂ ಇದೆ. ರೈತರು ತಮ್ಮ ಶೋಷಕರ ವಿರುದ್ಧ ಜಂಟಿ ಹೋರಾಟ ನಡೆಸುವುದಲ್ಲದೆ, ಜಾತಿ, ಧಾರ್ಮಿಕ ಸಮೂಹ, ಬುಡಕಟ್ಟು ಇತ್ಯಾದಿ ಪರಿಗಣನೆಗಳನ್ನೂ ಹೊಂದಿದ್ದಾರೆ. ಪ್ರಜ್ಞಾಪೂರ್ವಕ ವಿಚಾರವಾದಿ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ನಾಯಕತ್ವದ ಕೊರತೆ ಇರುವುದರಿಂದ ರೈತರು ತಮ್ಮತಮ್ಮಲ್ಲೇ ಹೋರಾಡಿ ಶೋಷಕರಿಗೆ ಲಾಭ ತರಬಹುದು. ಕಾರ್ಮಿಕವರ್ಗ, ಮಧ್ಯಮವರ್ಗದ ಉದ್ಯೋಗಿಗಳ ವಿರುದ್ಧ ಅವರನ್ನು ಎತ್ತಿಕಟ್ಟಬಹುದು. ನಗರದ ವಿರುದ್ಧ ಹಳ್ಳಿ ನಿಲ್ಲಬಹುದು ಕೃಷಿಯು ಕೈಗಾರಿಕೆಯ ವಿರುದ್ಧ, ಜಾತಿ ಇನ್ನೊಂದು ಜಾತಿಯ ವಿರುದ್ಧ ನಿಲ್ಲಬಹುದು.

ಈ ಅಪಾಯಕಾರಿ ಬೆಳವಣಿಗೆಯ ವಿರುದ್ಧ ಇರುವ ಏಕೈಕ ಗ್ಯಾರಂಟಿಯೆಂದರೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಜಾತ್ಯಾತೀತ ಶಕ್ತಿಗಳ ಐಕ್ಯತೆ. ಆರು ಪಕ್ಷಗಳ ಸಮನ್ವಯ ಸಮಿತಿ ಈ ದಿಕ್ಕಿನಲ್ಲಿಟ್ಟ ಮೊದಲ ಹೆಜ್ಜೆ.

ಕಾಂಗ್ರೈಗೆ ಬಿ.ಜೆ.ಪಿ. ಬೆಂಬಲ

ರಾಷ್ಟ್ರೀಯ ಏಕತೆಯ ಬಗ್ಗೆ ಆಸಕ್ತಿ ಇರುವವರೆಲ್ಲರೂ ಈ ಆರು ಪಕ್ಷಗಳ ಕಾರ್ಯಗಳಿಗೆ ಬೆಂಬಲ ಸೂಚಿಸಬೇಕು. ಆದರೆ ಜಾತ್ಯಾತೀತ ವಿಚಾರವಾದಿ ಶಕ್ತಿಗಳು ಒಟ್ಟಿಗೆ ಬರುವುದನ್ನು ತಡೆಯುವ ಅಂಶಗಳೂ ವಿರೋಧ ಪಕ್ಷಗಳಲ್ಲಿವೆ. ಉದಾಹರಣೆಗೆ ಕೇರಳ ಸರ್ಕಾರದ ವಿರುದ್ಧ ಬಿ ಜೆ ಪಿ. ಕಾಂಗ್ರೈಗೆ ಬೆಂಬಲ ಕೊಟ್ಟಿದೆ.

ಕೇಂದ್ರ ಮಂತ್ರಿಗಳಾದ ಗನಿಖಾನ್ ಚೌಧರಿ, ಸ್ಟೀಫನ್, ಮಕ್ವಾನ ಮುಂತಾದವರು, ಪ. ಬಂಗಾಳ, ತ್ರಿಪುರ ಮತ್ತು ಕೇರಳಗಳ ಬಗ್ಗೆ ನಡೆದುಕೊಳ್ಳುತ್ತಿರುವುದನ್ನು, ಪ್ರಜಾಪ್ರಭುತ್ವವಾದಿ ಪದ್ಧತಿಗಳಲ್ಲಿ ನಂಬಿಕೆ ಇರುವವರೆಲ್ಲರೂ ಪ್ರತಿಭಟಿಸಬೇಕು. ಪ್ರಧಾನಿಯೂ ಈ ಅಪಪ್ರಚಾರಕ್ಕೆ ದನಿ ಸೇರಿಸಿದ್ದಾರೆ. ಇದನ್ನು ವಿರೋಧ ಪಕ್ಷಗಳು ಪ್ರತಿಭಟಿಸಬೇಕು ಆದರೆ ಬಿಜೆಪಿ ನಾಯಕರಿಗೆ ಇದು ಮನಸ್ಸನ್ನು ಚುಚ್ಚುವುದಿಲ್ಲ. ಅವರೂ ಪ್ರಧಾನಿಯ ಜೊತೆ ಸೇರಿದ್ದಾರೆ.

ಎಲ್ಲ ವಿರೋಧ ಪಕ್ಷಗಳ ಮೇಲೆ ಆಕ್ರಮಣ

ಕಾಂಗ್ರೈ ಸರ್ಕಾರವು ಎಡ ಅಥವಾ ಬಲ ವಿರೋಧ ಪಕ್ಷಗಳಲ್ಲಿ ಯಾವ ವ್ಯತ್ಯಾಸವನ್ನೂ ಮಾಡುವುದಿಲ್ಲ. ದೇಶದ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ವಿರೋಧ ಪಕ್ಷಗಳು "ಸಹಕರಿಸುತ್ತಿಲ್ಲ" ಎಂದು ಪ್ರಧಾನಿ ದಿನದಿನವೂ ಹೇಳುತ್ತಾರೆ. ವಿರೋಧ ಪಕ್ಷದ ಕೆಲಸ, ಸರ್ಕಾರ ಏನು ಮಾಡಿದರೂ ಹೌದು ಎನ್ನುವುದು ಎಂದು ಅವಳು ತಿಳಿದಂತಿದೆ!

ಎಡಪಕ್ಷಗಳೂ ಸೇರಿದಂತೆ ವಿರೋಧ ಪಕ್ಷದ ಜೊತೆ ತಾವು ಒಗ್ಗೂಡಬೇಕೆಂದು ಲೋಕಸಭೆ, ರಾಜ್ಯಸಭೆಗಳ ಬಿಜೆಪಿ ನಾಯಕರು ಹೇಳಿದ್ದಾರೆ. ಆದರೆ ಅದೇ ಸರ್ಕಾರದೊಂದಿಗೆ ಸೇರಿ, ಕಾಂಗ್ರೈಯೇತರ ಸರ್ಕಾರಗಳ ಬಗ್ಗೆ ಅವರು ದ್ವೇಷಕಾರುವುದು ಹೇಗೆ? ಅವರ "ಪ್ರಜಾಪ್ರಭುತ್ವ" ಮತ್ತು "ಹಿಂದೂ ರಾಷ್ಟ್ರ"ದ ಸ್ಥಾಪನೆಗೆ ಎಡಪಕ್ಷಗಳು ನಿರ್ನಾಮವಾಗಿ ಕಾಂಗ್ರೈನ ಸಹಕರಿಸಬೇಕು ಎಂದು ಅವರು ತಿಳಿದಿದ್ದಾರೆಯೆ?

●

ಐಕ್ಯತೆ ಅನಿವಾರ್ಯ

(1ನೇ ಪುಟದಿಂದ)

ಅಚ್ಯುತಾನಂದನ್ ಮತ್ತು ಮುಖ್ಯಮಂತ್ರಿ ಕಾಂ. ಇ. ಕೆ. ನಯನಾರ್ ಪಕ್ಷದ ಕೆಲವರು ತಪ್ಪೆಸಗಿದ್ದಕ್ಕೆ ಶಿಸ್ತಿನ ಕ್ರಮ ಕೈಗೊಂಡಿದ್ದಾರೆ. ಕೇರಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ತಮ್ಮವರ ಬಗ್ಗೆಯೂ ಇದೇ ತರಹದ ನಿಲುವು ಅನುಸರಿಸಬೇಕು ಭವಿಷ್ಯದಲ್ಲಿ ಭಿನ್ನಾಭಿಪ್ರಾಯಗಳು ಉದ್ಭವಿಸಿದರೆ ಸುಮುಖವಾಗಿ ಬಗೆಹರಿಸಬೇಕೇ ವಿನಃ ಸಾರ್ವಜನಿಕವಾಗಿ ಪರಸ್ಪರ ದೂಷಿಸುವುದು ವಿಹಿತವಲ್ಲ.

ಕೇರಳದ ಜನತೆ ತಮ್ಮಲ್ಲಿಟ್ಟ ಅದಮ್ಯ ವಿಶ್ವಾಸಕ್ಕೆ ಯೋಗ್ಯವಾಗುವಂತೆ ಮತ್ತು ದೇಶದ ಪ್ರಜಾಪ್ರಭುತ್ವ ಪ್ರೇಮಿಗಳಲ್ಲಿ ಆಘಾತ ಉಂಟುಮಾಡದಂತೆ, ಸರ್ವಾಧಿಕಾರೀ, ಕೋಮುವಾದಿ ಶಕ್ತಿಗಳು ತಲೆಯೆತ್ತದಂತೆ ಮುನ್ನಡೆಸುವ ಮಹತ್ವದ ಜವಾಬ್ದಾರಿ ಎಡ - ಪ್ರಜಾಪ್ರಭುತ್ವ ರಂಗದ ಮೇಲಿದೆ.

○

ಉಡುಪಿಯಲ್ಲಿ ರೈತರ ಕೇಳಿಗಕೆಳನ್ನು ಕೂಡಲೇ ಈಡೇರಿಸುವಂತೆ ರೈತರ ಒತ್ತಾಯ

ತಾ. 1-12-80 ರಂದು ಉಡುಪಿ ತಾಲ್ಲೂಕಿನ ಗ್ರಾಮಾಂತರಗಳಿಂದ ಬಂದ ರೈತರು ಮತ್ತು ಕಾರ್ಮಿಕರು ತಮ್ಮ ಕೇಳಿಕೆಗಳಾದ ಅವಶ್ಯಕ ವಸ್ತುಗಳ ಬೆಲೆ ತಗ್ಗಬೇಕು, ರೈತರ ಉತ್ಪತ್ತಿಗೆ ನ್ಯಾಯ ಬೆಲೆ ದೊರೆಯಬೇಕು, ರೈತರ ಎಲ್ಲಾ ಸಾಲಗಳನ್ನು ರದ್ದುಗೊಳಿಸಬೇಕು, ಪರಿಹಾರವಿಲ್ಲದೆ ಭೂಮಿಯ ಒಡೆತನ ನೀಡಬೇಕು, ರೈತರಿಗೆ ಬೆಳೆ ಬೆಳೆಸಲು ಕಮ್ಮಿ ಬಡ್ಡಿಯಲ್ಲಿ ಸಾಲಕೊಡಬೇಕೆಂದು, ಕೃಷಿಕಾರ್ಮಿಕರಿಗೆ ಕನಿಷ್ಠ ಕೂಲಿ ನಿರ್ಣಯಿಸಿ ಜಾರಿಗೊಳಿಸಬೇಕೆಂದೂ, ಯಾವುದೇ ಕಾರಣದಿಂದ ರೈತರನ್ನು ಒಕ್ಕಲೆಬ್ಬಿಸದಂತೆ ರಕ್ಷಣೆ ಒದಗಿಸಬೇಕೆಂದೂ ಇವೇ ಮೊದಲಾದ ಕೇಳಿಕೆಗಳನ್ನು ಒತ್ತಾಯಿಸಿ ನಗರದಲ್ಲಿ ಪ್ರದರ್ಶನ ನಡೆಸಿ ಬೃಹತ್ ಮೆರವಣಿಗೆಯಲ್ಲಿ ತಹಶೀಲ್ದಾರರಲ್ಲಿಗೆ ತೆರಳಿ ಮುಖ್ಯಮಂತ್ರಿಯವರಿಗೆ ಕಳುಹಿಸಿಕೊಡುವಂತೆ ಮನವಿ ಒಪ್ಪಿಸಲಾಯಿತು.

ನಂತರ 5-30ಕ್ಕೆ ಅಜ್ಜರಕಾಡು ಗಾಂಧಿ ಮೈದಾನಿನಲ್ಲಿ ಜರುಗಿದ ಸಾರ್ವಜನಿಕ ಸಭೆಯಲ್ಲಿ ಜಿಲ್ಲಾ ರೈತಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾದ ಕಾಮ್ರೇಡುಗಳಾದ ಅಬ್ರಹಾಂ ಕರ್ಕಡ ಮತ್ತು ಯು. ಜನಾರ್ಧನ ನಾಯಕ್ ಇವರು ಮಾತನಾಡುತ್ತಾ ರೈತರ ಕೇಳಿಕೆಗಳನ್ನು ಬೇಗನೇ ಈಡೇರಿಸುವಂತೆ ಸರಕಾರವನ್ನು ಒತ್ತಾಯಿಸಿದರು.

ರಾಮ ಕೆ. ಕುಂದರರು ಅಧ್ಯಕ್ಷತೆ ವಹಿಸಿದ್ದರು ಪ್ರಾರಂಭದಲ್ಲಿ ಡೇವಿಡ್ ಕರ್ಕಡರು ಸ್ವಾಗತಿಸಿ ಕೊನೆಯಲ್ಲಿ ಟಿ ಎಸ್. ಕೋಟಿಯಾನ್ ವಂದಿಸಿದರು.

○

ಕುಣಿಗಲ್‌ನಲ್ಲಿ ವಸತಿಹೀನರ ಮತಪ್ರದರ್ಶನ

ಕಳೆದ ಒಂದು ವರ್ಷದಿಂದಲೂ ಸೈಟ್‌ಗಾಗಿ ಹೋರಾಟ ನಡೆಸಿದ್ದರೂ ಬಡಜನರಿಗೆ ನಿವೇಶನ ಹಂಚದರ ವಿರುದ್ಧ ದಿನಾಂಕ 24-11-80ರಂದು ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಮತಪ್ರದರ್ಶನ ಮಾಡಲಾಯಿತು.

"ಬಡವರಿಗೆ ಸೈಟು ತಕ್ಷಣ ವಿತರಣೆ ಮಾಡಬೇಕು" ಎಂದು ಘೋಷಣೆ ಕೂಗುತ್ತಾ ವಸತಿಹೀನರು ಮೆರವಣಿಗೆ ತೆಗೆದು ತಹಸೀಲ್ದಾರರಿಗೆ ಮನವಿ ಕೊಟ್ಟರು. ಅಲ್ಲದೇ ತಾಲ್ಲೂಕು ಕಚೇರಿ ಎದುರು ಅನಿರ್ಧಿಷ್ಟ ಅವಧಿಯ "ಮುಷ್ಕರ ಹೂಡಲಾಗಿದೆ. ಈ ಬಗ್ಗೆ ನಡೆದ ಸಭೆಯನ್ನು ಉದ್ದೇಶಿಸಿ ಕಾಂ. ಅಂಜಪ್ಪ, ಯೂನೂಸ್‌ಖಾನ್ ಮತ್ತು ಕಾಂ. ಬಡೇಸಾಹೇಬರು ಮಾತನಾಡಿ ನಿವೇಶನ ದೊರೆಯುವವರೆಗೂ ಹೋರಾಟ ಮುಂದುವರಿಸಬೇಕೆಂದು ಕರೆ ನೀಡಿದರು.

●

ಪೋಲೀಸ್ ದೌರ್ಜನ್ಯ ಖಂಡನೆ

ದಿನಾಂಕ 26-11-80 ರಂದು ಹುಬ್ಬಳ್ಳಿಯಲ್ಲಿ ಬೆಲೆ ಏರಿಕೆಯ ವಿರುದ್ಧ ಶಾಂತರೀತಿಯಿಂದ ಚಳುವಳಿ ಮಾಡುತ್ತಿದ್ದ ಮಹಿಳೆಯರ ಮೇಲೆ ಪೋಲೀಸರ ಲಾಠಿಚಾರ್ಜು, ಅಶ್ರುವಾಯು ಪ್ರಯೋಗಿಸಿದ್ದನ್ನು ಸವದತ್ತಿಯ ಎಸ್.ಎಫ್.ಐ. ಸಂಘಟನಾ ಸಮಿತಿ ಉಗ್ರವಾಗಿ ಖಂಡಿಸಿದೆ. ಈ ಘಟನೆಗೆ ಕಾರಣರಾದ ಪೋಲೀಸ್ ಅಧಿಕಾರಿಗಳನ್ನು ತಕ್ಷಣ ಸಸ್ಪೆಂಡ್ ಮಾಡಬೇಕು ಎಂದು ಒತ್ತಾಯಿಸಿದೆ.

○

ಎಸ್. ಎಫ್. ಐ. ರಾಜ್ಯ ಸಮ್ಮೇಳನಕ್ಕೆ ಸಿದ್ಧತೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ ಎಫ್ ಐ) ಕರ್ನಾಟಕ ರಾಜ್ಯ ಘಟಕದ ಮೂರನೆ ರಾಜ್ಯ ಸಮ್ಮೇಳನವನ್ನು 1981 ಜನವರಿ 10, 11 ಮತ್ತು 12 ರಂದು ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಈ ಸಮ್ಮೇಳನವನ್ನು ಯಶಸ್ವಿಗೊಳಿಸುವುದಕ್ಕಾಗಿ 1-12-80 ರಂದು 33 ಮಂದಿ ಸದಸ್ಯರ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ರೈತ ಮುಖಂಡ ಕಾಂ ಅಶ್ವತ್ಥರೆಡ್ಡಿಯವರು ಅಧ್ಯಕ್ಷರಾಗಿರುವ ಸ್ವಾಗತ ಸಮಿತಿಗೆ ವಿದ್ಯಾರ್ಥಿ ಮುಖಂಡರುಗಳಾದ ಕಾಂ. ಹರೀಂದ್ರ ಕಾರ್ಯದರ್ಶಿ ಮತ್ತು ಕಾಂ. ಬೈಯ್ಯಾರೆಡ್ಡಿ ಖಜಾಂಚಿಯಾಗಿ ನೇಮಿಸಲ್ಪಟ್ಟಿರುವರು.

ಸುಮಾರು 200 ಮಂದಿ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ. ಪ್ರತಿನಿಧಿ ಶುಲ್ಕ ರೂ 5. ಪ್ರತಿ 50 ಮಂದಿ ಎಸ್.ಎಫ್.ಐ. ಸದಸ್ಯರಿಗೊಬ್ಬ ಪ್ರತಿನಿಧಿಯಂತೆ ಆಯ್ಕೆಮಾಡಿ ಕಳುಹಿಸಬೇಕು. ಸಾಧ್ಯವಾದಡೆಗಳಲ್ಲೆಲ್ಲಾ ಜಿಲ್ಲಾ ಸಮ್ಮೇಳನಗಳನ್ನೂ ರಾಜ್ಯ ಸಮ್ಮೇಳನಕ್ಕೆ ಮೊದಲು ನಡೆಸಬೇಕು. ಸಮ್ಮೇಳನಕ್ಕೆ ಬರುವಾಗ ಸದಸ್ಯತ್ವದ ವಿವರ, ಸದಸ್ಯತ್ವದ ಪುಸ್ತಕಗಳನ್ನೂ ತರಲೇಬೇಕು. ಸದಸ್ಯತ್ವದ ಶುಲ್ಕವನ್ನು ರಾಜ್ಯಸಮಿತಿಗೆ ಸಂದಾಯಮಾಡದೆ ಸಮ್ಮೇಳನದಲ್ಲಿ ಭಾಗವಹಿಸುವುದು ಅಸಾಧ್ಯ.

ಮು. ಇ. ಇಕ್‌ಬಾಲ್ ಹುಸ್ಸೇನ್ — ಅಧ್ಯಕ್ಷ
ಸಂ. ರಾ. ಶಾಂತರೇಣುಕಾರಾಧ್ಯ — ಪ್ರಧಾನ ಕಾರ್ಯದರ್ಶಿ
ಎಸ್. ಎಫ್. ಐ. ಕರ್ನಾಟಕ ರಾಜ್ಯಸಮಿತಿ.

ಕೆಂಗಲ್ ನಿಧನಕ್ಕೆ ಸಂತಾಪ

ಕರ್ನಾಟಕ ರಾಜ್ಯದಲ್ಲಿ ಪ್ರಮುಖ ಪಾತ್ರವಹಿಸಿದ್ದ, ರಾಜಕೀಯ ಮತ್ತು ಬೇರೆಬೇರೆ ರಂಗಗಳಲ್ಲಿ ಸಕ್ರಿಯರಾಗಿದ್ದ ಕೆಂಗಲ್ ಹನುಮಂತಯ್ಯನವರು ನಿಧನರಾದ ಬಗ್ಗೆ ಸಿ. ಪಿ. ಐ. (ಎಂ) ರಾಜ್ಯಸಮಿತಿ ಸಂತಾಪ ಸೂಚಿಸುತ್ತದೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT